# ಪ್ರಸಂಗ ಸಂಗ್ರಹ – 1

ಸಂಗ್ರಹಕಾರರು : ಹರಿಕೃಷ್ಣ ಹೊಳ್ಳ , ಬ್ರಹ್ಮಾವರ .

ದೂರವಾಣಿ : 9449894366

# ಶ್ರೀ ದೇವೀ ಮಹಾತ್ಮೆ

(ಸಂಪೂರ್ಣ)

ಮೂಲಕೃತಿಯ ರಚನಾಕಾರರು : ಅಗರಿ ಶ್ರೀನಿವಾಸ ಭಾಗವತರು

(ವಿದ್ಯುನ್ಮಾಲಿಯ ಕಥೆ ಸಹಿತ)



# ಶ್ರೀ ದೇವೀ ಮಹಾತ್ಮೆ

(ಸಂಪೂರ್ಣ)

(ಪಾತ್ರಗಳು : ಬ್ರಹ್ಮ, ವಿಷ್ಣು, ಈಶ್ವರ, ಆದಿಮಾಯೆ, ಮಧು, ಕೈಟಭ, ದಿತಿ, ಮಾಲಿನಿ, ಸುಪಾರ್ಶ್ವಕ, ಚಾರಕ, ವಿದ್ಯುನ್ಮಾಲಿ, ರಕ್ಕಸಬಲದವರು, ಪುರೋಹಿತ, ದೇವದೂತ, ದೇವೇಂದ್ರ, ಅಗ್ನಿ, ವಾಯು, ವರುಣ, ಯಕ್ಷ, ರಕ್ಕಸದೂತ, ಮಹಿಷಾಸುರ, ಶಂಖಾಸುರ, ದುರ್ಗಾಸುರ, ಚಿಕ್ಷುರಾಸುರ, ಬಿಡಲಾಸುರ, ದೇವಿ, ಸಿಂಹ, ಚಂಡಾಸುರ, ಮುಂಡಾಸುರ, ಶುಂಭ, ನಿಶುಂಭ, ಸುಗ್ರೀವ, ಧೂಮ್ರಾಕ್ಷ , ಕಾಳಿ, ರಕ್ತಬೀಜ, ಸಪ್ತಮಾತೃಕೆಯರು, ಬೀಜಾದಿಗಳು, ರಕ್ತೇಶ್ವರಿ)

ಮೂಲಕೃತಿಯ ರಚನಾಕಾರರು : ಅಗರಿ ಶ್ರೀನಿವಾಸ ಭಾಗವತರು (ವಿದ್ಯುನ್ಮಾಲಿಯ ಕಥೆಯನ್ನು ಹಾಗೂ ಕೆಲವು ಪದ್ಯಗಳನ್ನು ಸೇರಿಸಲಾಗಿದೆ)

(ಭಾಮಿನಿ) : ಅಂಬುರುಹದಳನೇತ್ರೆ ಶ್ರೀದು | ರ್ಗಾಂಬಿಕೆಯ ಬಲಗೊಂಡು ಭಕ್ತಿಯೊ | ಳಂಬಿಕಾಸುತ ವಿಘ್ನರಾಜನ ಪಿರಿದು ಸಂಸ್ತುತಿಸಿ ||ಅಂಬುನಿಧಿಯಾತ್ಮಜೆಗೆ ಕೈಮುಗಿ | ದಂಬುಜಾಸನ ವಾಣಿಯರ ಪಾ | ದಾಂಬುಜಕೆ ಪೊಡಮಡುತ ವರ್ಣಿಪೆನೀ ಕಥಾಮೃತವ ||

(ತ್ರಿಮೂರ್ತಿಗಳ ಪ್ರವೇಶ)

(ತ್ರಿವುಡೆ-1) ಮೇದಿನೀಶ್ವರ ಸುರಥ ಲಾಲಿಸು | ಆದಿಯಲಿ ಓಂಕಾರವೆಂಬ ನಿ ‖ ನಾದದಲಿ ತ್ರೈ ಮೂರ್ತಿಗಳು ತಾ | ವಾದರಂದು ‖

ಬ್ರಹ್ಮ : (ತ್ರಿವುಡೆ-1) ಜನಿಸಲಜ್ಞಾನದಲಿ ತಮ್ಮಯ | ಮನದಿ ಯೋಚಿಸುತಿರ್ದರೀಪರಿ ‖ ಜನುಮವಾರಿಂ ದಾದುದೆಮಗೆಂ | ದೆನುವ ಬಗೆಯ ‖

ವಿಷ್ಣು : (ತ್ರಿವುಡೆ-1) ಕಾರಗತ್ತಲೆ ಮುಸುಕಿಕೊಂಡಿರೆ | ನೀರ ಮೇಲಕೆ ಇನಿತು ನಾವೇ ‖ ಮೂರು ಮಂದಿಗಳಿಲ್ಲಿ ಮೆರೆಯುವ | ಕಾರಣವನು ‖

ಈಶ್ವರ : (ತ್ರಿವುಡೆ-1) ಒರೆಯುವವರಾರೆಮಗೆ ಮುಂದಕೆ | ಇರುವ ಕಾರ್ಯಗಳೇನೆನುತ್ತಲೆ ‖ ಅರಿಯದಾದೆವೆನುತ್ತ ಮೂವರು | ಮರುಗುತಿರಲು ‖

(ಅಶರೀರವಾಣಿ)

(ಭಾಮಿನಿ) ಅರಸ ಕೇಳಾ ಸಮಯದೊಳಗಂ | ಬರದ ನುಡಿ ಕೇಳಿಸಿತು ಜ್ಞಾನವ | ಕರುಣಿಸಿಹೆ ನಿಮಗಾದಿ ಮಾಯೆಯ ಪದವ ಸ್ಮರಿಸಿದರೆ ‖ ಚರಣ ದರ್ಶನವಿತ್ತಭಯವ | ನ್ನೊರೆವಳೆಂಬುದ ಕೇಳಿ ಮೂವರು | ಮೆರೆದು ಸುಜ್ಞಾನದಲಿ ನುತಿಸಿದರಾದಿಮಾಯೆಯನು ‖

(ಆದಿಮಾಯೆಯನ್ನು ನೆನೆಯುವರು, ಆದಿಮಾಯೆ ಪ್ರತ್ಯಕ್ಷಳಾಗುವಳು)

ತ್ರಿಮೂರ್ತಿಗಳು : (ಅಷ್ಟ-1) ಜಯತು ಜಯತು ಆದಿಮಾಯೆ | ಸರ್ವ| ಭಯವಿನಾಶಿನಿಯೆ ನೀ ಕರುಣದಿ ಕಾಯೆ ‖ ದಯಸಾಗರೆಯೆ ಭಕ್ತಿಯಿಂದ | ಪದ | ದ್ವಯವನ್ನು ಮರೆಗೊಂಡೆವತಿ ಮುದದಿಂದ ‖

ಬ್ರಹ್ಮ : (ಏಕ) ಯಾತಕೆ ಜನುಮವನಿತ್ತೆ | ನಮ | ಗೇತರ ಕಾರ್ಯಗಳೇನುಂಟು ಮಾತೆ ‖ ನೀ ತಿಳುಹುತ ಸಕಲವನು | ಸಂ | ಪ್ರೀತಿಯೊಳ್ ರಕ್ಷಿಸಬೇಕು ನಮ್ಮುವನು ‖

ವಿಷ್ಣು : (ಕೋರೆ) ನೀನಲ್ಲದನ್ಯರಾರಿಹರು | ನಮ್ಮ | ಸಾನುರಾಗದೊಳಿನ್ನು ರಕ್ಷಿಸುವವರು ‖ ಜ್ಞಾನ ವಿಹೀನರಾಗಿರಲು | ತಾಯೆ | ನೀನಿತ್ತು ಸುಜ್ಞಾನ ಪೊರೆದೆ ಕೃಪೆಯೊಳು ‖

ಆದಿಮಾಯೆ : (ಅಷ್ಟ–1) ಹರಿಹರಬ್ರಹ್ಮರೆಂದಿರಿಸಿರೆ ನಾಮವ | ಹರುಷದಿ ಮೂವರಿಗೆ ‖ ಇರುವುದು ನಿಮ್ಮಿಂದ ಘನ ಕಾರ್ಯ ಮುಂದಕೆ | ಒರೆದಪೆನದ ನಿಮಗೆ ‖

ಆದಿಮಾಯೆ : (ಅಷ್ಟ–1) ಹೋದ ಕಲ್ಪದಿ ಲಯವಾದ ಪ್ರಪಂಚವ | ಮೋದದಿ ಸೃಜಿಸುವರೆ ‖ ಕಾಯ್ದು ಮೇಣ್ ಅದ ಲಯಗೊಳಿಸುವ ಹದನಕೆ | ಆಧಾರ ನೀವಾದರೆ ‖

ಆದಿಮಾಯೆ : (ಅಷ್ಟ–1) ಸತ್ವ ರಾಜಸ ತಮವೆನುತಿಪ್ಪ ಗುಣ ಮೂರು | ಮತ್ತೆ ರಾಜಸ ಗುಣದಿ ‖ ನಿತ್ಯ ಸೃಜಿಸಲೀ ವಿಧಾತನು ಸಾತ್ವಿಕ | ವೆತ್ತು ಹರಿಯು ಪೊರೆಯೆ ‖

ಆದಿಮಾಯೆ : (ಅಷ್ಟ–1) ಹರನು ತಾಮಸದಿ ಸಂಹರಿಸುತ್ತಲಿರ್ಪುದು | ನಿರತ ಎನ್ನಾಜ್ಞೆಯಲಿ ‖ ವರಸತ್ಯಲೋಕ ವೈಕುಂಠ ಕೈಲಾಸವು | ಇರುವರೆ ನೆಲೆ ನಿಮಗೆ ‖

ಆದಿಮಾಯೆ : (ಅಷ್ಟ–1) ಕಷ್ಟಕಾಲದೊಳೆನ್ನ ನಿಷ್ಠೆಯಿಂ ಭಜಿಸಲು | ಕೊಟ್ಟು ಸಂದರ್ಶನವ ‖ ಇಷ್ಟದಿ ಪೊರೆವೆನೆಂದಭಯವಿತ್ತೈದಲು | ತಟ್ಟನಂತರ್ಧಾನವ ‖

(ಆದಿಮಾಯೆ ಅಂತರ್ಧಾನಳಾದ ನಂತರ ತ್ರಿಮೂರ್ತಿಗಳಲ್ಲಿ ವಾದ)

ಬ್ರಹ್ಮ : (ಅಷ್ಟ–1) ಪೊಡವಿಪ ವೈಶ್ಯರಾಲಿಪುದು ರಾಜಸ ಗುಣ | ಅಡಸಿದರೆ ವಿಧಾತನು ‖ ಕಡು ಮದವನು ತಾಳಿ ತನ್ನಯ ಮನದಲ್ಲಿ | ನುಡಿದನು ಉಭಯರೊಳು ‖

ಬ್ರಹ್ಮ : (ಅಷ್ಟ–1) ಹರಿಹರರಾಲಿಸಿ ಸೃಜಿಸುವ ಕಾರ್ಯವ | ಕರುಣಿಸಿರಲು ಮಾತೆಯು ‖ ಅರಿತರೆ ನಮ್ಮಲ್ಲಿ ಹಿರಿಯವನ್ಯೆಸೆ ನಾ | ಮರೆಯಲ್ಲವಿದು ಖರೆಯು ‖

ವಿಷ್ಣು : (ತ್ರಿವುಡೆ,ಏಕ,ಕೋರೆ) ಪದುಮಾಕ್ಷ ನಗುತೆಂದ ವಿಧಿಯೇ ನೀ ಸುಮ್ಮನೆ | ಮದವ ತಾಳುವೆ ಯೇತಕೆ ‖ ಅಧಿಕ ತಾನೆನುತಲಿನ್ನಾದಿ ಮಾಯೆಯ ನೇಮ | ವದ ನಡೆಸುವ ಕಾರ್ಯಕೆ ‖

ಈಶ್ವರ : (ಅಷ್ಟ–1) ಮೃಡನೆಂದನಾಕ್ಷಣ ಲಯದಧಿಕಾರವ | ಪಡೆದವ ನ್ಯೆಸೆ ನಾನು ‖ ಸುಡುವೆನು ಸಕಲವ ಮುನಿಯಲಿನ್ನದರಿಂದ | ದೃಢದೊಳಧಿಕವೆಂದನು ‖

ಬ್ರಹ್ಮ : (ಏಕ,ಕೋರೆ) ಮೊದಲು ನಾ ಸೃಜಿಸಲು ಪದು ಮಾಕ್ಷ ಪೊರೆಯುವ | ನದ ಹರ ಲಯಗೊಳಿಪ ‖ ಅಧಿಕನಾನದರಿಂದ ಮೂವರೊಳೆಂದ ನಾ | ವಿಧಿಯು ಮದವ ಬಿಡದೆ ‖

ವಿಷ್ಣು : (ಏಕ,ಕೋರೆ) ಸೃಷ್ಟಿಪ ಕಾರ್ಯವದಷ್ಟೊಂದು ಘನವಲ್ಲ | ಕೆಟ್ಟು ಹೋಗದ ತೆರದಿ ‖ ಕೊಟ್ಟು ಬೇಕಾದುದ ಪೊರೆಯುವ ಹದನವೆ | ಶ್ರೇಷ್ಠ ವೆಂದೊರೆದ ಹರಿ ‖

ಈಶ್ವರ : (ಏಕ,ಕೋರೆ) ಹರನೆಂದನಾಕ್ಷಣ ಸರಿ ನಿನ್ನ ವಚನವು | ಪೊರೆಯುವಾತನೆ ಶ್ರೇಷ್ಠನು ‖ ಹರಿಹರರೆಮ್ಮಲಿ ಬೇಧವಿಲ್ಲದೆ ನಿನ್ನೊ | ಳೆರಕವಾಗಿಹೆನು ನಾನು ‖

(ಹರ ನಿರ್ಗಮಿಸುವನು)

ಬ್ರಹ್ಮ : (ಜಂಪೆ–2) ಹರಿಹರರು ನೀವೀರ್ವರೆರಕವಾಗಿರಲಿನ್ನು | ಇರುವುದೇ ಭೀತಿ ಮನದೊಳಗೆ ‖ ಹಿರಿತನವನೀಕ್ಷಣವೆ ಪರಿಕಿಸುವ ಬಗೆಗಾಗಿ | ಧುರಗೈವ ನಾವು ನಮ್ಮೊಳಗೆ ‖

ವಿಷ್ಣು : (ಮಟ್ಟೆ) ವಾದದಿ ಫಲವಿಲ್ಲ ಶೋಧನೆಯಿಂದಲಿ | ಸಾಧಿಸಿ ತಿಳಿಯುವ ನಿಜವ ‖ ಹೋದ ಕಲ್ಪದಿ ಲಯವಾದ ಪ್ರಪಂಚವು| ಐದಿ ಭರದಿ ನೆಲೆಸಿರುವ‖ಹದನವರಿಯಲೋರ್ವನುದರವ

ಇನ್ನೋರ್ವ| ಒದಗಿಲಿ ಪೊಗುತ ಸರ್ವವನು ‖ ಮುದದಿ ಶೋಧಿಸುತ ಕಂಡುದನು ಪೇಳುವದೆನೆ| ವಿಧಿ ತೋರ್ದ ತನ್ನುದರವನು ‖

(ಹರಿಯು ಬ್ರಹ್ಮನ ಜಠರವನ್ನು ಪ್ರವೇಶಿಸುತ್ತಾನೆ, ಬ್ರಹ್ಮ ತೆರಳಿದ ಬಳಿಕ)

ವಿಷ್ಣು : (ತ್ರಿವುಡೆ–1) ಹರಿಯು ಪೊಗುತಲೆ ವಿಧಿಯ ಜಠರವ| ಪರಿಕಿಸಲು ಬಳಿಕಲ್ಲಿ ಕಂಡನು‖ ಸರಿದಕಲ್ಪದಿ ಪ್ರಳಯ ಹೊಂದಿದ|ಧರೆಗಳೆಲ್ಲ‖

ವಿಷ್ಣು : (ತ್ರಿವುಡೆ–1) ಸ್ವರ್ಣಮಯವಾಗಿರಲಿಕೀತ ಹಿ | ರಣ್ಯಗರ್ಭನು ಎನುತ ಮನದಲಿ ‖ ನಿರ್ಣಯವ ತಳೆದಾಗಲಾ ಹರಿ|ತನ್ನ ಮನದಿ ‖

ವಿಷ್ಣು : (ತ್ರಿವುಡೆ–1) ಸಾರುವೆನು ಹೊರಗೆನುತ ಮೇಲಕೆ | ಏರಿ ತುದಿಯನು ಕಾಣದೆಯೆ ಬಾ ‖ ಯಾರಿ ಕೆಳಗಿಳಿದರಸಿ ಕಂಡಧೋ | ದ್ವಾರವನ್ನು ‖

ವಿಷ್ಣು : (ಕಂದ) ಆ ದ್ವಾರದಿ ಪೊರಟಾಕ್ಷಣ | ಮಾಧವ ಕನಕೋದರನ ಬಳಿಗೈತಂದಾಗಂ ‖ ಸಾಧಿಸಿಕೊಂಡಿಹ ಹದನವ | ಮೋದದಿ ತಾ ನುಡಿದನಿರದೆ ಕಮಲಜನೊಡನೆ ‖

(ಹರಿಯು ಹೊರಗಡೆ ಬಂದು ಬ್ರಹ್ಮನೊಡನೆ ಹೀಗೆನ್ನುವನು)

ವಿಷ್ಣು : (ಅಷ್ಟ–1) ಶೋಧಿಸಿದೆನು ನಿನ್ನುದರವ | ಒಳ | ಗೈದಿ ನಾ ಕಂಡೆನು ಭರದಲಿ ಮೆರೆವ ‖ ಹೋದ ಕಲ್ಪದಿ ಲಯವಾದ | ಸರ್ವ| ಮೇದಿನಿಗಳು ಮೆರೆಯುತಿಹ ವಿನೋದ ‖

ವಿಷ್ಣು : (ಅಷ್ಟ–1) ಕುಂದಣ ಮಯವಾಗಿರುವುದು | ಅದ| ರಿಂದ ಹಿರಣ್ಯ ಗರ್ಭನು ನೀನೆನ್ನುವುದು‖ ಹೊಂದಿತು ಪೆಸರೊಂದು ನಿನಗೆ | ಹೊರ | ಬಂದಿರ್ಪೆ ನಾ ಅಧೋದ್ವಾರದ ಒಳಗೆ ‖

(ಭಾಮಿನಿ) ಹರಿಯೆ ನೀ ಬಹುಹೀನ ದ್ವಾರದಿ | ಸರಿದ ಕಾರಣದಿಂದ ಮುಂದಕೆ | ಕರೆಯಲ್ಕೈ ನಿನ್ನುವನ ಧೋಕ್ಷಜನೆಂಬ ಪೆಸರಿನಲಿ ‖ ಅರಿತುಕೋ ಪಂಥವನು ಬಿಡುವೆನೆ | ಸರಿದು ನಿನ್ನುದರವನು ಶೋಧಿಸಿ | ಬರುವೆನೀಕ್ಷಣವೆಂದು ಪೊಕ್ಕನು ಹರಿಯ ಜಠರವನು ‖

(ಬ್ರಹ್ಮನು ಹರಿಯ ಜಠರವನ್ನು ಪ್ರವೇಶಿಸುತ್ತಾನೆ, ಹರಿ ತೆರಳಿದ ಬಳಿಕ)

ಬ್ರಹ್ಮ : (ರೂಪಕ) ಸುರಥ ವೈಶ್ಯರು ಕೇಳಿ ಪರಮೇಷ್ಟಿ ಗರ್ವದಿ| ಹರಿಯ ಜಠರವನು ಪೋಗುತಲಿ‖ ಪರಿಕಿಸಿ ಕಂಡನು ಸರಿದ ಕಲ್ಪಗಳಲ್ಲಿ | ಮರೆಗೊಂಡ ಧರಣಿ ಎಲ್ಲವನು ‖

ಬ್ರಹ್ಮ : (ರೂಪಕ) ದ್ವಾದಶಾದಿತ್ಯರೇಕಾದಶ ರುದ್ರರು | ಸಾದರದಲ್ಲಿ ಕಮಲಜರು ‖ ಆ ದೇವನುದರದಿ ಮೆರೆಯಲನೇಕರು | ಮೋದದೊಳೀಕ್ಷಿಸುತೆಂದ ‖

ಬ್ರಹ್ಮ : (ರೂಪಕ) ಬ್ರಹ್ಮಾಂಡೋದರ ಭರಿತನು ಹರಿ ನಿಶ್ಚಯ | ಹೆಮ್ಮೆಯ ತಳೆದು ನಾನ್ಯಾಕೆ ‖ ಸುಮ್ಮನೆ ಪಂಥವ ಗೈದೆ ಹರಿಯೊಳೆಂದು | ಬೊಮ್ಮ ಮರುಗಿದನು ಮನದಲ್ಲಿ ‖

ಬ್ರಹ್ಮ : (ರೂಪಕ) ತೆರಳುವೆ ಹೊರಗೆಂದು ಸರಿದು ಮೇಲಕೆ ತುದಿ | ದೊರಕದಾಗಲು ಕೆಳಗಿಳಿದು ‖ ಅರಸಿ ಪಥವನ್ನು ಕಾಣದೆಯೆ ತರಹರಿಸುತ್ತ | ಲಿರೆ ದಿವ್ಯ ಸಾಹಸ್ರ ಕಾಲ ‖

(ಭಾಮಿನಿ) ಸ್ಮರಿಸೆ ಭಕ್ತಿಯೊಳಾದಿಮಾಯೆಯ | ಹರಿಯ ನಾಭೀಕಮಲ ನಾಳದಿ | ಮೆರೆವ ಪಥ ಗೋಚರಿಸೆ ಪೊರಟಾಕ್ಷಣವೆ ಧೈರ್ಯದಲಿ ‖

(ಅಶರೀರವಾಣಿ)

ಬ್ರಹ್ಮ : (ಭಾಮಿನಿ) ಬರುತಿರಲು ಹರಿ ಯೋಗ ಮಾಯೆಯ | ವೆರಸಿ ವಟಪತ್ರದಲಿ ತಾ ಮಲ | ಗಿರಲು ನಿದ್ರೆಯೊಳಂದು ಕಾಲ್ಬೆರಳಿರಿಸಿ ಬಾಯೊಳಗೆ ||

ಬ್ರಹ್ಮ : (ವಾರ್ಧಿಕ) ಬರುತಲಾ ಕಮಲಜಂ ಸರಸಿಜದ ಮೇಲೆ ತಾ | ನಿರದೆ ಪದ್ಮಾಸನವ ಭರದಿಂದ ಬಲಿದು ಕು | ಳ್ಳಿರುತ ನಾಲ್ದೆಸೆ ನೋಡೆ ಮೆರೆದ ನಾಲ್ಮೊಗದಿಂದಯಿರದೆ ಮೇಲಕೆ ನೋಡಲು || ವರ ಪಂಚ ವದನದಿಂ ಪರಿಶೋಭಿಸುತ್ತಲವ | ಹರಿಯ ಪದಯುಗಗಳಂ ಸ್ಮರಿಸುತ್ತ ಭಕ್ತಿಯೊಳ | ಗಿರುವ ವೇಳ್ಯದೊಳಾದುದಚ್ಚರಿಯು ಏನೆಂಬೆ ಸುರಥ ವೈಶ್ಯರು ಲಾಲಿಸಿ ||

(ಅಬ್ರ) ಹರಿಯು ಮಲಗಿರೆ ಯೋಗನಿದ್ರೆಯೊ | ಳಿರದೆ ಕರ್ಣದ ಕಿಲ್ಬಿಷವ ಕಿರು | ಬೆರಳಿನಲಿ ಹೊರಗೆಡಹೆ ದಾನವರೀರ್ವರುದಿಸಿದರು ||

(ಮಧು ಕೈಟಭರ ಪ್ರವೇಶ)

ಮಧು : (ಅಷ್ಟ–2) ಅರರೆ ಏನಚ್ಚರಿಯೂ | ತಿಳಿಯದು | ಪರಿಕಿಸಲಾವೆಡೆಯೂ || ಮೆರೆಯುತ್ತಲೀರ್ವ್ರದು| ಜಲಮಯವಾಗಿಯೆ | ಹೊರತು ಕಾಣಿಸದನ್ಯಥಾ ||

ಕೈಟಭ : (ಅಷ್ಟ–2) ಕಾರುಗತ್ತಲೆಯಲ್ಲದೇ | ಕಂಗಳಿಗಿನ್ನು | ಬೇರೇನು ಕಾಣುವುದೇ || ಈರೀತಿಯಿಂದಲಿ | ಜನ್ಮಕೊಟ್ಟವರಾರು | ತಿಳಿಯುವುದ್ ಹ್ಯಾಗೆ ನಾವು ||

(ಹೆಸರಿಟ್ಟುಕೊಂಡ ನಂತರ)

ಮಧು–ಕೈಟಭರು : (ತ್ರಿವುಡೆ–2) ಧೀರ ಮಧು ಕೈಟಭರು ಎನ್ನುವ | ವೀರನಾಮವನಿರಿಸಿಕೊಳ್ಳುತ|| ಭೋರುಗರೆಯುವ ಶರಧಿಯಲಿ ಸೋ | ದರರು ಸೇರಿ ||

ಮಧು : (ಅಷ್ಟ–2) ಉದರಾಗ್ನಿ ಬಾಧಿಪುದು | ಬಲವಾಗಿ | ಏನಗ್ಯೆಯುವುದು ಎಂದು || ಮುದದಿಂದ ಧನುಜರು | ಯೋಚಿಸಲಾಕ್ಷಣ | ತಿಳಿದರು ಕಾರ್ಯವನ್ನು ||

(ಆಹಾರ ಹುಡುಕುವರು)

ಮಧು–ಕೈಟಭರು : (ಏಕ) ಜಡಧಿಯ ಶೋಧಿಸುವ | ಆಹಾರವ | ಹುಡುಕುತ್ತ ನಾವ್ಯೆದುವ || ಪಿಡಿದು ಭಕ್ಷಿಸುವುದು ದೊರಕಿದನೆನುತಲಿ | ನಡೆದರು ಶೌರ್ಯದಲಿ ||

ಮಧು–ಕೈಟಭರು : (ಏಕ) ಮೊಣಕಾಲಿನ ಪರಿಯಂತರವಿಹ ಜಲ | ವನು ಕದಡುತಲಂದು || ದನುಜರು ಶೋಧಿಸುತಾಹಾರವನಾ | ವನಧಿಯೊಳಗೆ ನಲಿದು ||

ಮಧು–ಕೈಟಭರು : (ಏಕ) ಬಡಿದೆಬ್ಬಿಸುತಲೆ ಜಡಧಿಯನೀರ್ವರು | ನಡೆತರೆ ಶೌರ್ಯದಲಿ || ಜಡಜದಿ ಕುಳಿತಿಹ ಕಮಲಜನನು ಕಂ | ಡೊಡನತಿ ಹರುಷದಲಿ ||

(ಬ್ರಹ್ಮ ಬಂದು ಕುಳಿತಿರುತ್ತಾನೆ, ಅವನನ್ನು ನೋಡಿ)

ಮಧು : (ಏಕ) ಸಿಕ್ಕಿದನಿದಕೋ ಚಿಕ್ಕವನೋರ್ವನು | ಪಕ್ಕನೆ ಕಮಲದಲಿ || ಸೊಕ್ಕಿಲಿ ಕುಳಿತಿಹ ಮುಕ್ಕುವುದೀತನ | ಫಕ್ಕನೆ ಪಿಡಿಯುತಲಿ ||

ಕೈಟಭ : (ಏಕ) ಪಿಡಿ ಪಿಡಿ ಜಲದೊಳಗಡಗುವ ಮುನ್ನವೆ | ಹುಡುಗನ ಪಿಡಿಯೆನುತ || ನಡೆತಹ ದೈತ್ಯರನೀಕ್ಷಿಸಿ ಕಮಲಜ | ನಡ ನಡುಗುತ ಭಯದಿ ||

ಬ್ರಹ್ಮ : (ತ್ರಿವುಡೆ–1) ಹರಿಯ ನಾಭೀಕಮಲನಾಳದಿ | ಮರೆಗೊಳುತಲೆ ವಿಧಾತ ಮನದಲಿ || ತರಹರಿಸಿದನು ದೈತ್ಯರುರೆ ತಿನ | ಬರುವರೆಂದು ||

ಬ್ರಹ್ಮ : (ತ್ರಿವುಡೆ–1) ಹರಿಯು ತಾ ನಿದ್ರೆಯಲಿ ಮಲಗಿಹ | ಪೊರೆಯುವವರ್ಯಾರೆನುತ ಮನದಲಿ ‖ ಬರಿದೆ ಕೆಟ್ಟೆನು ತಾನೆನುತ್ತಲೆ | ಅಜನು ಮರುಗಿ ‖

ಬ್ರಹ್ಮ : (ತ್ರಿವುಡೆ–1) ವ್ಯರ್ಥ ಮರುಗುವುದೇತಕಭಯವ | ನಿತ್ತಿರಲು ಮೊದಲಾದಿ ಮಾಯೆಯು ‖ ಕಷ್ಟಕಾಲದಿ ಸ್ತುತಿಸೆ ಪೊರೆವೆನೆ | ನುತ್ತ ಹಿಂದೆ ‖

(ಅಶರೀರವಾಣಿ)

ದೇವಿ : (ತ್ರಿವುಡೆ–1) ಮರುಗಲೇಕೆ ವಿಧಾತ ಮನದಲಿ | ಸ್ಮರಿಸಿರುವುದ್ಯಾಕೆನ್ನನೀಪರಿ ‖ ಒರೆಯಬಾರದೆ ಬಂದ ಕಷ್ಟವ | ನರಿತುಕೊಂಬೆ ‖

ಬ್ರಹ್ಮ : (ತ್ರಿವುಡೆ–1) ಮಾತೆ ಲಾಲಿಸು ಜಲದೊಳೀರ್ವರು | ಧೂರ್ತರುದಿಸುತ ಎನ್ನನಿಂದಿಲಿ ‖ ಘಾತಿಸಲಿಕ ಟ್ಟುವರು ಅದರಿಂ | ಭೀತಿಗೊಂಡೆ ‖

ದೇವಿ : (ಭಾಮಿನಿ) ಮರುಗಬೇಡ ವಿಧಾತ ನಾ ಶ್ರೀ | ಹರಿಯ ಸೇರಿಹ ಕಾರಣದೊಳವ | ನಿರುವ ನಿದ್ರೆಯೊಳಿನ್ನು ಶೀಘ್ರದೊಳಗಲಿ ಪೋಗುವೆನು ‖ ಭರದೊಳೆಚ್ಚರಗೊಂಡು ದೈತ್ಯರ | ತರಿದುಕೊಡುವನು ಭೀತಿ ಬೇಡೈ | ವರಸುದರ್ಶನ ಕೊಡುತವಗೆ ನೀ ಮರೆಯೊಳಿಹುದೆಂದು ‖

(ಬ್ರಹ್ಮ ನಿರ್ಗಮಿಸಿದ ನಂತರ ಹರಿ ಬಂದು ಕುಳಿತಿಕೊಳ್ಳುತ್ತಾನೆ)

(ಭಾಮಿನಿ) ತೊಲಗಿ ನಿಲಲಾ ಯೋಗಮಾಯೆಯು | ನಳಿನನಾಭನು ತೊರೆದು ನಿದ್ರೆಯ | ಕುಳಿತಿರಲು ಕಿರುನಗೆಯ ಬೀರುತ ತನ್ನ ವದನದಲಿ ‖

(ಅಲ್ಲಿಗೆ ಮಧು–ಕೈಟಭರು ಬರುತ್ತಾರೆ)

(ಅಬ್ರ) ಜಲಧಿಯಲಿ ಶೋಧಿಸುತ ವಿಧಿಯನು | ಖಳರು ನಡೆತರುತಾಗ ಕಂಡಾ | ನಳಿನನಾಭನನಿರದೆ ನುಡಿಸಿದರಾಗ ಗರ್ವದಲಿ ‖

ಮಧು : (ಮಟ್ಟೆ) ಪೋರ ನೀನು ಯಾರು ಪೇಳು | ಬೀರಲೇಕೆ ಕಿರುನಗೆಯನು ‖ ನೀರ ಮೇಲೆ ಕುಳಿತುಕೊಂಡ | ಕಾರಣೇನೆಲಾ ‖

ಕೈಟಭ : (ಮಟ್ಟೆ) ತೋರು ಬೇಗ ಮೊದಲು ಕಂಡ | ಪೋರನೆಲ್ಲಿ ಪೋದ ಭಂಡ ‖ ಧೀರರಾವು ನಮ್ಮ ಕಂಡು | ಓಡಿಪೋದನೆ ‖

ಮಧು–ಕೈಟಭರು :(ತ್ರಿವುಡೆ–2) ಧೀರ ಮಧು ಕೈಟಭರು ನಾವ್ಯೆ| ವೀರರೆಮ್ಮವಿಚಾರವರಿಯೆಯ ‖ ಬೋರನುಸಿರೆಲೊ ಯಾರು ನೀನೆ | ನ್ನುತಲಿ ಬೇಗ ‖

ವಿಷ್ಣು : (ಏಕ,ಕೋರೆ) ಧೀರ ಮಧು ಕೈಟಭರೆ ನೀವು | ಭೂರಿತೋಷವಾಂತೆ ದಿಟವು ‖ ಯಾರ ಕಂಡಿರಯ್ಯ ಮೊದಲು ವಿ | ಚಾರ ಅರಿಯೆನು ‖ ತೋರುವ ಜಲಧಿಗೆ ಅಧಿ | ಕಾರಿಯಾಗಿರುವೆನು ನಾನು ‖ ಬೇರೆ ಕಾಣೆ ಎನ್ನ ಹೊರತು | ವಾರಿಧಿಯಲ್ಲಿ ‖

ಮಧು : (ಮಟ್ಟೆ) ಜಲಧಿಗೊಡೆಯ ತಾನೆಂದೆನುತ | ಗಳಹಬೇಡ ಎಲವೋ ಧೂರ್ತ ‖ ತಿಳಿಯದೆಮ್ಮ ವಿಕ್ರಮವನು | ಸಲುಗೆಯಿಂದಲಿ ‖

ಕೈಟಭ : (ಮಟ್ಟೆ) ತಲೆಗಳೈದು ಮೊದಲಿನವಗೆ | ಎಲವೊ ಒಂದೆ ಶಿರವು ನಿನಗೆ ‖ ಇಳುಹಿ ನಿನ್ನ ಗಂಟಲೊಳಗೆ | ಕಳೆವೆ ಹಸಿವನು ‖

ವಿಷ್ಣು : (ಏಕ,ಕೋರೆ) ಇಳಿವ ತುತ್ತಿದಲ್ಲ ನಿಲ್ಲಿ | ಛಲವು ಬೇಡ ನಿಮಗೆನ್ನಲ್ಲಿ ‖ ನಲವಿನಿಂದ ಪದಕೆ ಮಣಿಯೆ | ಸಲಹಿಕೊಂಬೆನು ‖ ತಲೆಗಳ್ಯೆದರವನು ಸಹಿತ | ಕಲಿಗಳಾದ ನೀವು ಸಹಿತ ‖ ತಳುವದೆನ್ನೊಳ್ಯೆಕ್ಯವೆಲ್ಲ | ತಿಳಿದುನೋಡಿರಿ ‖

ಮಧು : (ಮಟ್ಟೆ) ಪೊರೆವದಾತನ್ಯಾರೊ ನಮ್ಮ | ಬರಿದೆ ಗಳಹಬೇಡ ಹಮ್ಮ ‖ ಶರಣು ಬರುವುದುಂಟೆ ನಾವು | ಧುರಸಮರ್ಥರು ‖

ಕೈಟಭ : (ಮಟ್ಟೆ) ಪರಿಕಿಸಬೇಕಿನ್ನಾ ಬಗೆಯ | ಮರೆಸು ನಿನ್ನ ಭುಜದ ಸಿರಿಯ ‖ ಧುರದೊಳೆಂದು ಪಿಡಿದೆಳೆದರು | ಹರಿಯನಾಕ್ಷಣ ‖

ವಿಷ್ಣು : (ಏಕ) ಫಡ ಫಡ ದನುಜಾಧಮರೆ | ನಾ | ನುಡಿದ ಹಿತವ ಮೀರಿದರೆ ‖ ಕಡೆಗಾಲವು ನಿಮಗಿಂದು | ದಿಟ | ಪಿದಿದೆಳೆಯುವಿರ್ಯೆ ಬಂದು ‖

ಮಧು : (ಏಕ) ಗಳಹದಿರೆಲವೊ ವ್ಯರ್ಥ | ಫಡ | ಕೊಲುವವರ್ಯಾರೆಲೊ ಧೂರ್ತಾ ‖ ಕಲಿಗಳಾದ ನಮ್ಮುವನು | ದಿಟ | ಉಳಿಸೆವು ನಾವ್ ನಿನ್ನನ್ನು ‖

ಕೈಟಭ : (ಏಕ) ತುತ್ತೊಂದಕೆ ಸಾಲದಿರೆ | ನೀ | ವ್ಯರ್ಥ ಪೌರುಷವಾಡಿದರೆ ‖ ಚಿತ್ತದಿ ಬಗೆವವರಲ್ಲ | ತವ | ಸತ್ವವ ಪರಿಕಿಪುದೆಲ್ಲ ‖

ವಿಷ್ಣು : (ಏಕ) ಸರಿ ಸರಿ ವಿಕ್ರಮರಹುದು | ಸಂ | ಗರದಲಿ ಪರಿಕಿಸಬಹುದು ‖ ವರಭುಜಸಿರಿಯನ್ನೆನುತ | ದ್ಯೆ | ತ್ಯರಿಗೆಂದನು ಗರ್ಜಿಸುತ ‖

(ಯುದ್ಧ , ನಡುವೆ ಯುದ್ಧ ನಿಲ್ಲಿಸಿ)

ವಿಷ್ಣು : (ಭಾಮಿನಿ) ಸೆಣಸಿ ಪಂಚಸಹಸ್ರಕಾಲದಿ | ದನುಜರಲಿ ಜಯ ಸೇರದಿರುತಿರೆ | ನಳಿನನಾಭನು ಸ್ಮರಿಸೆ ಭಕ್ತಿಯೊಳಾದಿಮಾಯೆಯನು ‖ ಮನದೊಳರಿತನು ಧುರದೊಳಸದಳ | ಹನನಗೊಳಿಸುವೆ ಕಪಟದೊಳಗೆಂ | ದೆನುತಲಾ ಮಧುಕೈಟಭರ ಪೊಗಳುತ್ತಲಿಂತೆಂದ ‖

ವಿಷ್ಣು : (ಅಷ್ಟ-1) ಮೆಚ್ಚಿದೆ ನಿಮ್ಮ ಪೌರುಷಕೆ | ಬಲು | ಹೆಚ್ಚಿನ ತೋಳ ಸಾಹಸಕೆ ‖ ಆಶ್ಚರ್ಯವಾಂತೆ ನಾನುಚ್ಚರಿಸುವುದೇನು | ಅಚ್ಚಳಿಯದ ಭಟರಹುದು ಸಂಗರದಲ್ಲಿ ‖

ವಿಷ್ಣು : (ಅಷ್ಟ-1) ವ್ಯೆರದೋರದು ಮನದೊಳಗೆ | ಮೋಹ | ವೇರುತ್ತಲಿದೆ ಎದೆಯೊಳಗೆ ‖ ಭೋರನೆ ನಿಮ್ಮಿಷ್ಟವೇನದ ಬೆಸಗೊಳೆ | ಕಾರುಣ್ಯದಿಂದೀವೆ ವೀರರೆ ಕೇಳಿರಿ ‖

ಮಧು-ಕೈಟಭರು : (ಅಷ್ಟ-2) ಎನಲೆಂದರಾಗ ಗರ್ವದಲಿ | ನೀನು | ರಣದಿ ಸೋತವನು ನಮ್ಮಲ್ಲಿ ‖ ಮನದಿರವಿತ್ತಪೆನೆನುವುದು ತರವಲ್ಲ | ನಿನಗೆ ಬೇಕಾದುದ ಅನುಮಾನಿಸದೆ ಕೇಳು ‖

(ಭಾಷೆ ಪಡೆದ ನಂತರ)

ವಿಷ್ಣು : (ಏಕ) ಸಿಕ್ಕಿದಿರೀ ಕೈಯೊಳಗೆ | ಬಲು | ಅಕ್ಕಸದಾ ಖಳರೆನಗೆ ‖ ಸೊಕ್ಕಿಲಿ ಭಾಷೆಯನಿಕ್ಕುತ ನುಡಿದಿರಿ | ತಕ್ಕುದ ಕೇಳ್ವೆನು ಜಕ್ಕ ಜವ್ವನಿಗರೆ ‖

ವಿಷ್ಣು : (ಭಾಮಿನಿ) ಕೊಡುವ ದಾತರು ನೀವು ನಿಶ್ಚಯ | ಪಡೆವ ಭಾಗ್ಯಕೆ ಬೇರೆ ಕಾಣೆನು | ಅಡಸಿರಲು ಜಲ ನಾಲ್ಕು ದಿಕ್ಕಿಲಿ ನಿಮ್ಮ ಶಿರಗಳನೆ ‖ ಕೊಡುವುದೆಂದೆನಗೆನುತ ದಾನವ | ರೊಡನೆ ಬೆಸಗೊಳೆ ಲಾಲಿಸುತಲಾ | ನುಡಿಯ ಹಮ್ಮೈಸುತ್ತ ತಮ್ಮೊಳಗೆಂದರೀ ತೆರದಿ ‖

ಮಧು-ಕೈಟಭರು : (ಮಟ್ಟೆ) ಏನ ಮಾಡುವುದೆಮ್ಮ ಪ್ರಾಣವ ಕೇಳಿದ | ಜಾಣತನದಲಿ ವಂಚಿಸುತ‖ ತಾನೀವೆ ಮನದಿರವೆನುತಲಿ ನಂಬಿಸಿ | ಗೋಣ ಕತ್ತರಿಸುವನೀತ ‖

ಮಧು–ಕೈಟಭರು : (ಮಟ್ಟೆ) ಕೇಳದೆ ಮದವನು ತಾಳಿದ ಕಾರಣ | ಬಾಳುವೆ ಕೆಡಿಸಿದೆವಕಟ ‖ ಪೇಳಿನ್ನು ಫಲವೇನು ಎನುತಲೆ ತಮ್ಮೊಳು | ಆಲೋಚಿಸುತಲೆಂದರವರು ‖

ಮಧು–ಕೈಟಭರು : (ಮಟ್ಟೆ) ಅರಿತೊಂದು ಯುಕ್ತಿಯಲಿ ದುರುಳ ದಾನವರಾಗ | ಹರುಷವ ತಳೆದು ಮತ್ತವರು ‖ ಹರಣವುಳಿಯಿತೆಂದು ಹರಿತಂದು ಶೌರ್ಯದಿ | ಹರಿಯೊಡನೆ ಇಂತೆಂದರಾಗ ‖

ಮಧು–ಕೈಟಭರು : (ಮಟ್ಟೆ) ನುಡಿದಂತೆ ಶಿರಗಳ ಕೊಡುವೆವು ದಿಟವಾಗಿ| ಒಡಲಿಗೆ ಜಲ ಸೋಕದಂತೆ ‖ ಪಡೆಯುವೆಯಾದರೆ ತಡವಿಲ್ಲವೆನುತಲೆ | ನುಡಿಯೆ ದೈತ್ಯರು ಹರಿ ನಗುತ ‖

ವಿಷ್ಣು : (ಮಟ್ಟೆ) ಅರಿಯರೆನ್ನನು ಇವರೆನುತಲಿ ಶ್ರೀಹರಿ | ಕರುಣಿಸಿ ಜ್ಞಾನ ದೃಷ್ಟಿಯನು ‖ ಮೆರೆಯೆ ವಿರಾಟ ರೂಪದೊಳದನೀಕ್ಷಿಸಿ | ನೆರೆಸ್ತುತಿಸಿದರಾ ಶ್ರೀಹರಿಯ ‖

ಮಧು–ಕೈಟಭರು : (ಏಕ) ಕ್ಷೀರಾರ್ಣವಶಯನ | ನಾರಾಯಣ | ನೀರಜದಳನಯನ ‖ ಘೋರದುರಿತ ಸಂ|ಹಾರಣ ದೀನೋ| ದ್ಧಾರಿ ರಮಾರಮಣ|ನಾರಾಯಣ‖ ಮೃತ್ಯುಂಜಯ ಮಿತ್ರ | ಪವಿತ್ರ | ನಿತ್ಯಸನ್ನುತಿ ಪಾತ್ರ ‖ ಮತ್ತೇಭವರದ | ದೈತ್ಯಾನ್ವಯಗಜ | ಮೊತ್ತ ಪಂಚವಕ್ತ್ರ| ಪವಿತ್ರ ‖

ವಿಷ್ಣು : (ಮಟ್ಟೆ) ಮೆಚ್ಚಿದೆ ನಿಮ್ಮಯ ಭಕ್ತಿಭಾವಕೆ ನಾನು | ಹೆಚ್ಚು ಮಾತುಗಳಿಂದಲೇನು ‖ ಉಚ್ಚರಿಸಲು ಮನದಿಚ್ಛೆಯೇನೆಂಬುದ | ನಿಶ್ಚಯವಾಗಿ ಪಾಲಿಪೆನು ‖

ಮಧು–ಕೈಟಭರು : (ಮಟ್ಟೆ) ಹರಿಯೆ ನಿನ್ನಯ ದಿವ್ಯ ಪದವೀಕ್ಷಿಸಿದ ಮೇಲೆ | ಇರುವುದೇ ಬಯಲಾಸೆ ಮನದಿ‖ ಸ್ಥಿರವಾಗಿ ಕೀರ್ತಿಯು ಮೆರೆಯುವ ತೆರದಲ್ಲಿ | ಪೊರೆಯಬೇಕೆಮ್ಮನು ದಯದಿ‖

ವಿಷ್ಣು : (ಜಂಪೆ–2) ಕೇಳಿರೈ ನಿಮ್ಮ ಕಥೆಯ | ವಿಸ್ತರಿಸಿ | ಪೇಳುವೆನು ಮೂಲ ಸ್ಥಿತಿಯ ‖ ಬಾಲಕರು ನೀವು ಎನಗೆ | ಸುಳ್ಳಲ್ಲ | ಶೀಲ ಸದ್ಗುಣಗಳೊಳಗೆ ‖

ವಿಷ್ಣು : (ಭಾಮಿನಿ) ಕರುಣಿಸುತಲಭಯವನು ಜಂಘೆಯೊ | ಳಿರಿಸಿ ದೈತ್ಯರ ಶಿರಗಳನು ಸಂ | ಹರಿಸುತಲೆ ಮೇದಸ್ಸನಾ ಜಲಧಿಯಲಿ ಸೇರಿಸುತ ‖ ಧರೆಯ ಸೃಜಿಸುತ ಮೇದಿನೀಯೆನು | ತಿರಿಸಿ ಪೆಸರನು ನಾಭಿಕಮಲದಿ | ಮೆರೆವ ಕಮಲಜನನ್ನು ನೇಮಿಸಿ ಸೃಷ್ಟಿ ಕಾರ್ಯದಲಿ ‖

(ದಿತಿಯ ಪ್ರವೇಶ)

ದಿತಿ : (ಭಾಮಿನಿ) ಇತ್ತಲಾ ಕಶ್ಯಪ ಮುನೀಶನ | ಪತ್ನಿಯಾಗಿಹ ದಿತಿಯು ತನ್ನಯ | ಪುತ್ರರೆಲ್ಲರು ಸುರಪುರವ ಬಯಸುತ್ತ ಸಂಗರಕೆ‖ಸತ್ವದಿಂದಲೆ ಪೋಗಿ ತ್ರಿದಶರ | ಕೃತ್ರಿಮಕೆ ಸಿಲುಕುತ್ತ ಮಡಿದರೆ| ನುತ್ತ ತನ್ನಯ ಮನದಿ ಹಂಬಲಿಸುತ್ತ ಪೇಳಿದಳು ‖

ದಿತಿ : (ಏಕ) ಮುಂದೇನು ಗತಿ ತನಗೆ | ಎನ್ನಯ ಮುದ್ದು | ಕಂದರು ಮಡಿದ ಮೇಗೆ ‖ ಇಂದ್ರ ಲೋಕವ ಬಯಸಿ | ತೆರಳಿ ಧುರ | ಕೆಂದು ಮಾರ್ಬಲವೆರಸಿ ‖

ದಿತಿ : (ಕೋರೆ) ತ್ರಿದಶರ ಪಕ್ಷದಲಿ | ಮಕ್ಕಳ ಕೊಂದ | ಮಧುವೈರಿ ಕಪಟದಲಿ ‖ ವಿಧಿಯೆನ್ನ ಫಣೆಯೊಳಗೆ | ಬರೆದ ಬರಹ | ವಿದನು ಪೇಳುವೆನ್ಯಾರಿಗೆ ‖

ದಿತಿ : (ಕೋರೆ) ಅನುಜೆಯ ಸುತರೆಲ್ಲರು | ನಾಕದ ಭಾಗ್ಯ | ಅನುಭವಿಸುತಲಿಹರು ‖ ಎನಗಿಲ್ಲದಿರೆ ಸುತರು | ಆ ಸಂಪದ | ವನು ಪಡೆಯುವುದಿನ್ಯಾರು ‖

(ಮಾಲಿನಿಯ ಪ್ರವೇಶ)

ಮಾಲಿನಿ : (ತ್ರಿವುಡೆ–1) ತರುಣಿಮಣಿ ಮಾಲಿನಿಯು ಆ ಕ್ಷಣ | ಹರುಷದಿಂದಲಿ ಬಂದು ಮಾತೆಯ‖ ಪದಕೆ ವಂದಿಸಿ ನುಡಿದಳತ್ತಾ | ನಂದದಿಂದ ‖

ಮಾಲಿನಿ : (ಅಷ್ಟ–1) ಚಿಂತಿಪುದ್ಯಾಕವ್ವ ತಾಯೆ| ಗುಣ | ವಂತೆ ನೀನೆನಿಸಿಹೆ ಕೋಮಲಕಾಯೆ ‖ ಸಂತಸದಿಂದೆನ್ನ ಅಪ್ಪಿ ಮುದ್ದಿಸುತ ನೀ | ಸಂತೋಷ ತಳೆವೆ ಈ | ಸಂತಾಪವೇನು ‖

ದಿತಿ : (ಜಂಪೆ–1) ಅಮರ ಲೋಕವ ಕಿರಿಯರಾಳುವುದು ಸಮವೆ | ಕಮಲಮುಖಿ ನಿನಗೆ ವಿರಚಿಸಲಿಲ್ಲ ಮದುವೆ ‖ ಅಮಮ ಕರ್ಬುರವಂಶ ವೃದ್ಧಿಯಾಗುವುದೆಂತು | ಕಮಲಸಂಭವನ ಕೃಪೆಯಿಲ್ಲದಿನಿತಾಯ್ತು ‖

ದಿತಿ : (ಭಾಮಿನಿ) ತರಳೆ ನೀನದರಿಂದ ತಪದಲಿ | ಸರಸಿಜೋದ್ಭವನನ್ನು ಒಲಿಸುತ | ತರಳರುದಿಸುವ ವರವ ಪಡೆದರೆ ಬಳಿಕ ನಿನಗಾನು ‖ ವಿರಚಿಸುವೆ ಪರಿಣಯವ ನೀ ಮನ| ಮರುಗಬೇಡೆಂದೆನಲು ಕೇಳುತ| ಎರಗಿ ನೇಮವಗೊಂಡು ಪೊರಟಳು ಅಜನ ತಪಕೆಂದು ‖

(ದಿತಿಯು ತೆರಳಿದ ಬಳಿಕ , ಮಾಲಿನಿಯ ಒಮ್ಮೆ ನಿರ್ಗಮಿಸಿ ಪುನಹ ಪ್ರವೇಶಿಸುವಳು)

ಮಾಲಿನಿ : (ಅಷ್ಟ–1) ಜನನಿಯಾಜ್ಞೆಯಲಿ ಮಾಲಿನಿಯು| ವರ | ತನುಜಾಪೇಕ್ಷೆಯಲಿ ಕಾಮಿನಿಯು‖ ಕನಕಗರ್ಭನ ತಪವನು ಗೈವೆನೆನುತಲಿ | ವನಕಾಗಿ ನಡೆತಂದು ಮನದಿ ಯೋಚಿಸಿದಳು ‖

ಮಾಲಿನಿ : (ತ್ರಿವುಡೆ,ಏಕ,ಕೋರೆ) ಚೆಲುವಿಕೆ ಯೌವನದಿಂದ | ಕಂ | ಗೊಳಿಸುವೆ ನಾನದರಿಂದ ‖ ಇಳೆಯ ಕಾಮುಕರೆನ್ನ ಕಂಡರೆ ಮೋಹಿಸ | ದುಳಿಯರು ತಪಕವರ್ ಎಡರಾಗದಿಹರು ‖

ಮಾಲಿನಿ : (ಅಷ್ಟ–1) ಸುರರೆಮ್ಮ ಹಗೆಗಳಾಗಿಹರು | ನಿಜ | ವರಿತರೆ ತಪಕೆ ವಿಘ್ನವಗೈಯದಿಹರು ‖ ಮರೆಸಿ ನಾ ನಿಜವನ್ನು ಧರಿಸಿ ಮಹಿಷಿರೂಪ | ವಿರಚಿಪೆ ತಪವೆಂದು ತರಳೆ ಯೋಚಿಸಿದಳು ‖

(ಮಾಲಿನಿಯು ಮಹಿಷಿರೂಪ ಧರಿಸಿ ತಪಸ್ಸನ್ನು ಮಾಡುತ್ತಾಳೆ , ಅಷ್ಟರಲ್ಲಿ ಸುಪಾರ್ಶ್ವಕ ಬರುತ್ತಾನೆ)

ಸುಪಾರ್ಶ್ವಕ : (ತ್ರಿವುಡೆ–2) ಇನಿತು ಮಾಲಿನಿ ಮಹಿಷಿರೂಪದಿ | ವನಜ ಪೀಠನ ತಪದೊಳಿರಲಾ ‖ ವನದೊಳಿರುತಿಹ ಮುನಿ ಸುಪಾರ್ಶ್ವಕ | ತಿಳಿಯುತಾಗ ‖

ಸುಪಾರ್ಶ್ವಕ : (ತ್ರಿವುಡೆ–2) ಅರರೆ ಏನಾಶ್ಚರ್ಯವೀಪರಿ | ತರುಣಿಯೋರ್ವಳು ಮರೆಸಿ ನಿಜವನು ‖ ವಿರಚಿಪಳು ವರ ತಪವನಿಂದಿನೊಳ್ | ಒರೆಯಲೆಂತು ‖

ಸುಪಾರ್ಶ್ವಕ : (ತ್ರಿವುಡೆ–2) ದಿತಿಯ ಸುತೆಯಹ ಮಾಲಿನಿಯು ತಾ | ಅದಿತಿ ಸುತರನು ಹನನಗೈವಡೆ ‖ ವನದಿ ತಪವನು ಗೈವಳೆಂಬುದ | ಮುನಿಯು ತಿಳಿದು ‖

ಸುಪಾರ್ಶ್ವಕ : (ಏಕ) ಕೊಡುವೆನು ಶಾಪವನೆನ್ನುತ ಮುನಿಪನು | ಕೋಪದೊಳುರಿಯುತಲೀ ‖ ಕೆಡುಗಾಲವು ಬಂತೀ ದನುಜೆಗೆ ಎ | ನ್ನುತ ತಾ ಮುಳಿಯುತಲಿ ‖

ಸುಪಾರ್ಶ್ವಕ : (ತ್ರಿವುಡೆ–2) ಮುನಿಕುಲಕ್ಕಪಮಾನವಾದುದು | ತನುಜನಾಪೇಕ್ಷೆಯೊಳಗಿಹಳಲಿ ‖ ಜನಿಸಲಿನ್ನಾ ಮಹಿಷನೆನ್ನುತ | ವನಕೆ ನಡೆದ ‖

(ಮುನಿಯು ಶಾಪ ಕೊಟ್ಟು ತೆರಳುತ್ತಾನೆ, ಇದರ ಅರಿವಿಲ್ಲದ ಮಾಲಿನಿ ತಪಸ್ಸನ್ನು ಮುಂದುವರಿಸುತ್ತಾಳೆ , ಅಬ್ರಕ್ಕೆ ಬ್ರಹ್ಮ ಪ್ರತ್ಯಕ್ಷನಾಗುತ್ತಾನೆ)

ಬ್ರಹ್ಮ : (ಅಬ್ರ) ಪೊರೆಯೊ ಎನ್ನನು ಎನುತ ದೃಢಮನ | ವಿರಿಸಿ ತಪವನು ಗೈಯುತಿರಲಾ ‖ ಸರಸಿಜೋದ್ಭವ ಕರುಣದಿಂ ಮೈ | ದೋರಿದನು ಸತಿಗೆ ‖

ಬ್ರಹ್ಮ : (ಏಕ,ಕೋರೆ) ಏನಿದು ಏನಿದು ಘನತರ ತಪವು| ಮಾನಿನಿಮಣಿಯೆ ನೀ ಬಳಲಿಹೆ ದಿಟವು‖ ಸಾನುರಾಗದಿ ಪೇಳು ಮನದಿರವನ್ನು | ನಾನೀವೆ ಬಿಡು ತಪ ಏಳು ನೀನಿನ್ನು ‖

ಮಾಲಿನಿ : (ರೂಪಕ) ಕರುಣಾಸಾಗರದೇವ ಪರಮೇಷ್ಠಿ ಕೇಳಯ್ಯ | ಹರುಷದಿಂದಲೆ ಮನದಿರವ ‖ ಧುರಧೀರನಾಗಿಹ ತರಳನ ಬಯಸಿ ನಾ | ವಿರಚಿಸಿದೆನು ಘೋರ ತಪವ ‖

ಬ್ರಹ್ಮ : (ಏಕ,ಕೋರೆ) ಕೊಟ್ಟೆನು ಮಗಳೆ ಸಂಶಯವಿಲ್ಲ ನಿನ್ನಲಿ | ಹುಟ್ಟುವ ಲೋಕೈಕ ವೀರಾಧಿ ವೀರ ‖ ತಟ್ಟಿತು ಮುನಿಶಾಪ ಅದರಿಂದ ಮುಂದಕೆ | ದಿಟ್ಟ ಮಹಿಷಾಸುರ ಜನಿಸುವನೆನಲು ‖

ಮಾಲಿನಿ : (ಭಾಮಿನಿ) ತಾಪವಾಂತಜನಂಘ್ರಿಯುಗಳದಿ | ಪಾಪಿಯಾದೆನೆನುತ್ತ ದನುಜೆ ಪ್ರ ‖ ಲಾಪಿಸುತ ಹೊರಳಿದಳು ಶೋಕದೊಳು ‖

ಬ್ರಹ್ಮ : (ತ್ರಿವುಡೆ–1) ಎಲೆ ಮಗಳೆ ದು:ಖಿಸಲದ್ಯಾತಕೆ | ಖಳನು ಬಲನಾಗುವನು ಮುಂದಕೆ ‖ ಮಲೆತು ದನುಜರ ಕುಲವನಾಳುವ | ಛಲದಿ ತಾನು ‖

ಮಾಲಿನಿ : (ಕೋರೆ) ಜನನಿ ಎಂದುದಕ್ಕೆ ಬಂದೆನು | ಅಯ್ಯೋ ವಿಧಿಯೇ | ವಿನಯದಿಂದ ನಿನ್ನ ಭಜಿಸಿದೆನು ‖ ಮುನಿಯ ಶಾಪ ಬಂದೊದಗಿತಲ್ಲೋ | ಅಯ್ಯೋ ವಿಧಿಯೇ | ಮಹಿಷ ಜನಿಸಲೇನ ಗೈವೆನು ‖

ಬ್ರಹ್ಮ : (ತ್ರಿವುಡೆ–1) ಮರುಗದಿರು ಮಾಲಿನಿಯೆ ಮುನಿವರ | ನೊರೆದ ವಚನವು ತಪ್ಪಲರಿಯದು ‖ ಮುಖದಿ ಮಾತ್ರವೆ ಮಹಿಷನಾಪನು | ವ್ಯಥಿಸಬೇಡೆಂದ ‖

ಮಾಲಿನಿ : (ಕೋರೆ) ಅನಿಮಿಷರ ಪುರವನಾಳುವ | ಮಗನಾ ಬಯಸಿ| ಇನಿತು ಎಸಗಿದೆ ತಪವ ‖ ಜನಿಸೆ ಮಹಿಷನು ಎನ್ನಲಿ | ಫಲವೇನು ಪೋಗಿ| ಜನನಿಯೊಳ್ ಏನೆನ್ನಲಿ ‖

ಬ್ರಹ್ಮ : (ಭಾಮಿನಿ) ಸುರನರೋರುಗ ಮುಖ್ಯಲೋಕಕೆ | ಧೊರೆಯು ತಾನಾಗುವನು ದಿಟವಿದು ‖ ಮರುಗಬೇಡೆಂದಜನು ಮನ್ನಿಸಿ | ತೆರಳಲಂದು ‖

(ಬ್ರಹ್ಮ ತೆರಳುತ್ತಾನೆ , ಮಾಲಿನಿಯು ತಾಯಿಗೆ ತಿಳಿಸುತ್ತೇನೆಂದು ಹೊರಡುತ್ತಾಳೆ , ಪದ್ಯಕ್ಕೆ ದಿತಿಯ ಪ್ರವೇಶ)

ದಿತಿ : (ತ್ರಿವುಡೆ–1) ತರಳೆಯಾಡಿದ ನುಡಿಯ ಕೇಳುತ | ದಿತಿಯು ಮನದಲಿ ಹರುಷ ತಾಳುತ ‖ ಯೋಚಿಸುತ ಚಾರಕನ ಕರೆದಿಂ | ತೆಂದಳಾಗ ‖

(ದಿತಿಯು ಚಾರಕನನ್ನು ವಿದ್ಯುನ್ಮಾಲಿಯಲ್ಲಿಗೆ ಕಳಿಸುತ್ತಾಳೆ , ಪದ್ಯಕ್ಕೆ ವಿದ್ಯುನ್ಮಾಲಿಯ ಪ್ರವೇಶ)

ವಿದ್ಯುನ್ಮಾಲಿ : (ತ್ರಿವುಡೆ–2) ಉತ್ತಮದ ಸಿಂಹಾಸನದಿ ತಾ | ಚಿತ್ತಹರುಷದಿ ವಿದ್ಯುನ್ಮಾಲಿಯು ‖ ಭೃತ್ಯರನು ಕೂಡುತ್ತ ಓಲಗ | ವಿತ್ತನಾಗ ‖

ವಿದ್ಯುನ್ಮಾಲಿ : (ಜಂಪೆ–2) ಎಡಬಲವ ನೋಡುತಲಿ | ಧಡಿಗನಾಕ್ಷಣ ತಾನು ‖ ಕಡು ಹರುಷದಿಂ ನುಡಿದ | ತನ್ನವರಿಗಾಗ ‖

(ದಿತಿಯು ಕಳಿಸಿದ ಚಾರಕ ಬರುತ್ತಾನೆ)

ವಿದ್ಯುನ್ಮಾಲಿ : (ತ್ರಿವುಡೆ–2) ಅರರೆ ಏನಾಶ್ಚರ್ಯವೆನುತಲಿ | ತ್ವರೆಯೊಳೈತಂದಿಹನ ಕಾಣುತ ‖ ಭರದಿ ಕೇಳಿದ ನಾಗ ಬಂದಿಹ | ಪರಿಯಿದೇನೈ ‖

ಚಾರಕ : (ಏಕ) ಲಾಲಿಸಬೇಕು ಜೀಯ | ದಾನವರಾಯ| ಲಾಲಿಸಬೇಕು ಜೀಯ ‖ ಶೋಣಿತದಿಂದ ಬಂದೆ | ವಾಣಿಯೊಂದನು ತಂದೆ | ತ | ಕ್ಷಣದೊಳು ಪೊರಡಿ ನೀವಿಂದು ‖ ದಾನವರಾಯ ‖

ಚಾರಕ : (ಏಕ) ದಿತಿಸುತೆ ಮಾಲಿನಿಗೆ | ಬಂದಿದೆ ಪ್ರಾಯ | ಒದಗಿನಿಂ ಬಹುದಲ್ಲಿಗೆ ‖ ಮುದದಿ ಶೃಂಗಾರವಾಗಿ | ಮದುಮಗ ನೀವಾಗಿ ‖ ಬರಬೇಕು ನೀವಲ್ಲಿಗೆ ‖ ದಾನವರಾಯ ‖

ವಿದ್ಯುನ್ಮಾಲಿ : (ಆದಿ,ಏಕ,ಕೋರೆ) ಭಳಿರೆ ಶಹಭಾಸು ದೂತ | ಮಾಲಿನಿ ದೇವಿ| ಚೆಲುವೆ ಎಂದೆಂಬ ಮಾತ ‖ ಕಲಕಿತು ಮನವೆನ್ನ ಕಲಹಂಸ ಗಮನೆಯ | ವರಿಸಬೇಕೆಂಬಾಸೆ ಬಲವಾಗುತಿದೆ ನೋಡು ‖

ವಿದ್ಯುನ್ಮಾಲಿ : (ತ್ರಿವುಡೆ–2) ಏರಿ ಮಣಿಮಯ ರಥವನಾಕ್ಷಣ | ಭಾರಿ ದಿಬ್ಬಣ ಕೂಡಿ ಪೊರಟನು ‖ ಸಾರುತಾಗಲೆ ಶೋಣಿತಕೆ ತಾ | ಭೂರಿ ಸಂತಸದಿ ‖

(ದಿಬ್ಬಣ ಕೂಡಿಕೊಂಡು ಹೊರಡುತ್ತಾನೆ , ದಿತಿಯು ಕರೆದು ಉಪಚರಿಸುತ್ತಾಳೆ)

ದಿತಿ : (ಭಾಮಿನಿ) ನೋಡುತಲಿ ದಿತಿದೇವಿ ಹರುಷದಿ | ಆಸನವನಿತ್ತುಪಚರಿಸುತಲಿ ‖ ಪೇಳಿದಳು ನಿಜಮನದ ವಾಂಛೆಯ | ಖೂಳನೊಡನಾಗ ‖

(ಪುರೋಹಿತರನ್ನು ಕರೆಸುತ್ತಾರೆ , ಮಾಲಿನಿಯನ್ನು ಶೃಂಗರಿಸಿ ತರುತ್ತಾರೆ)

(ಚೌತಾಳ) ಶೃಂಗಾರವಾದಳು ಶೋಣಿತದ ಬಾಲೆ | ಅಂಗಜಾತನ ಮದದಾನೆ ಸುಶೀಲೆ ‖ ಅಂಗಕೆ ಅರಶಿನವನು ಹಚ್ಚಿ ಮಿಂದು | ಮಂಗಳಾಂಗಿಯು ದುಕೂಲವನುಟ್ಟು ನಿಂದು ‖

(ಹಾರ ಬದಲಾಯಿಸಿಕೊಳ್ಳುವಾಗ)

(ಮಂತ್ರ) ತದೇವ ಲಗ್ನಂ ಸುದಿನಂತು ದೇವಾ | ತಾರಾಬಲಂ ಚಂದ್ರಬಲಂತು ದೇವಾ ‖ ವಿದ್ಯಾಬಲಂ ದೈವಬಲಂತು ದೇವಾ | ಉಮಾಪತೇ ತೇಂಘ್ರಿಯುಗಂ ಸ್ಮರಾಮಿ ‖ ಕುರ್ಯಾತ್ ಸದಾ ಮಂಗಲಂ ‖

(ಮಾಂಗಲ್ಯ ಸರ ಕಟ್ಟುವಾಗ)

(ಮಂತ್ರ) ಮಾಂಗಲ್ಯಂ ತಂತುನಾನೇನ | ಮಮ ಜೀವನಹೇತುನಾ ಕಂಠೇ ‖ ಬಧ್ನಾಮಿ ಸುಭಗೇ | ತ್ವಂ ಜೀವ ಶರದಾಂ ಶತಂ ‖

(ಆರತಿ ಎತ್ತುವಾಗ)

(ಚೌತಾಳ) ರಾಜಿಪ ಮಣಿಮಯ ರತ್ನಪೀಠದಲಿ | ರಾಜಾಧಿರಾಜ ವಿದ್ಯುನ್ಮಾಲಿ ಕುಳ್ಳಿರಲು ‖ ರಾಜೀವಾಂಬಕಿ ಮಾಲಿನಿಯು ಎಡದೊಳಿರೆ | ರಾಜವದನೆಯರು ಹರಿವಾಣದಲಿ ‖ ರಾಜಿಸುವಾರತಿಯಾ ಬೆಳಗಿದರು | ಶೋಭಾನೆ ‖

(ಚೌತಾಳ) ಕಾಮಿನಿರನ್ನಗೆ ಸೋಮಸುಂದರಗೆ | ಕಾಮಾರಿಸುಪ್ರೀತ ಕಮಲನಯನನಿಗೆ ‖ ಕನಕಕುಂಡಲಧರ ಕನಕಾಂಗಿ ರಮಣಗೆ | ಕನಕಾಭರಣಾದಿ ಮಣಿಭೂಷಣಗೆ ‖ ಕನಕಾದಾರತಿಯಾ ಬೆಳಗಿದರು | ಶೋಭಾನೆ ‖

(ಮದುವೆ ಮುಗಿದು ಎಲ್ಲರೂ ತೆರಳಿದ ನಂತರ ವಿದ್ಯುನ್ಮಾಲಿಯು ಪುನಹ ಪ್ರವೇಶಿಸಿ , ಮಾಲಿನಿಯನ್ನು ಕರೆದು)

ವಿದ್ಯುನ್ಮಾಲಿ : (ಅಷ್ಟ–1) ರಮಣಿ ಕೇಳೆಲೆ ನಾನು ಇಂದೀಗ ನಾಕಕೆ|ಪೋಗಿ ಸುರರನು ಸದೆಬಡಿದು‖ ತ್ವರಿತದಿ ಮಘವನ ಗೆಲಿದು ನಾ ಬರುವೆನು | ಮುದದೊಳೆನ್ನನು ಕಳುಹು‖

ಮಾಲಿನಿ : (ಅಷ್ಟ–1) ರಮಣ ಕೇಳ್ ತರವಲ್ಲ ಸುರರು ವಿಕ್ರಮಿಗಳು | ಧುರದಿ ಸೋಲುವರೆ ನಿಮಗೆ ‖ ಅಸುರಾರಿ ಎಂದಿಗೂ ಸುರರ ಪಕ್ಷವ ಬಿಡನು| ಪೋಗುವುದು ಉಚಿತವಲ್ಲ ‖

ವಿದ್ಯುನ್ಮಾಲಿ : (ಜಂಪೆ–2) ಬಿಡು ಬಿಡಾ ಚಿಂತೆಯನ್ನು | ಈ ಕ್ಷಣದಿ | ಕೆಡಹಿ ಸುರಲೋಕವನ್ನು ‖ ವಡನೆ ವಶಪಡಿಸಿಕೊಳುತ | ಅಟ್ಟುತಲಿ | ಯಮಲೋಕಕವರ ಬೇಗ ‖

(ವಿದ್ಯುನ್ಮಾಲಿಯು ಮಾಲಿನಿಯನ್ನು ಸಂತೈಸಿ ಕಳುಹಿಸುತ್ತಾನೆ)

ವಿದ್ಯುನ್ಮಾಲಿ : (ತ್ರಿವುಡೆ–2) ಮಡದಿಯನು ಸಂತೈಸುತಾಗಲೆ | ಒಡನೆ ತನ್ನಯ ಸೇನೆಯೊಂದಿಗೆ ‖ ಬಿಡದೆ ಆಯುಧಗಳನು ಪಿಡಿಯುತ | ಧಡಿಗನಾಗ ‖

(ರಕ್ಕಸ ಬಲದವರನ್ನೆಲ್ಲ ಕರೆಯುತ್ತಾನೆ , ಒಬ್ಬೊಬ್ಬರಾಗಿ ಪ್ರವೇಶ , ತೈತೈತೈತೈ ...........)

ರಕ್ಕಸ –1 : (ತತ್ತತೈ) ಏತಕೆನ್ನನು ಕರೆಸಿದೆ ನೀನೀ|ತತುಕ್ಷಣದಲಿ ಧೊರೆಯೇ ‖ ಏನೆನಗಪ್ಪಣೆ ಬೋರನೆ ಒರೆಯೆನೆ | ಖೂಳಖಳನು ನುಡಿದ ‖

ರಕ್ಕಸ –2 : (ತ್ರಿವುಡೆ–2) ಶೂರ ದಾನವರಾಯ ಎಮ್ಮನು | ಕರೆಸಿದಂದವ ಬೋರನೊರೆಯೋ ‖ ಹೀರಲೇ ಶರಧಿಯನು ಸೂರ್ಯನ | ನೇರಿ ಕೆಳತರಲೇ ‖

ವಿದ್ಯುನ್ಮಾಲಿ : (ತ್ರಿವುಡೆ–2) ಸುರಪಮುಖ್ಯರ ಗೆಲುವುದಲ್ಲದೆ | ಅಸುರಕುಲಕೆ ತ್ರಿಶೂಲನಂತಿಹ ‖ ಸಿರಿಯಪತಿಯನು ತರಿವೆನೆನ್ನುತ | ಭರದಿ ಪೊರಟ ‖

(ಬಲದವರನ್ನೆಲ್ಲ ಕೂಡಿಕೊಂಡು ಸ್ವರ್ಗಕ್ಕೆ ಧಾಳಿ ಇಡುತ್ತಾನೆ , ದೇವೇಂದ್ರನ ಓಲಗ)

ದೇವೇಂದ್ರ : (ತ್ರಿವುಡೆ–1) ಸುರಪನೊಂದಿನ ಅಗ್ನಿ ಮಾರುತ| ವರುಣ ಮೊದಲಾದಖಿಳ ಬಲವನು‖ ಕರೆದು ನುಡಿಸಿದ ದುರುಳ ದಾನವ | ರಟ್ಟುಳಿಯನು ‖

ಅಗ್ನಿ : (ತತ್ತತೈ) ಸುರಪಾಲ ಲಾಲಿಸಯ್ಯ | ದಾನವರ ಸಂ | ಗರಕುಂಟೆ ಭಯವು ಜೀಯ ‖ ದುರುಳರು ನಾಕಕ್ಕೆ ಬರಲು ಸಂಗ್ರಾಮದಿ ತರಿದಿಕ್ಕುವೆವು ನಿಶ್ಚಯ ‖

ವಾಯು : (ದಿತ್ತತ್ತ) ಸುರಧೇನು ಕಲ್ಪತರು | ಮುಂತಾಗಿಹ | ವರವಸ್ತುಗಳಖೂಳರು ‖ ಮರುಳರಂತಿಚ್ಛಿಸಿ ಧುರಕೈದಿ ನಮ್ಮಲಿ ಹರಣ ನೀಗಾಡುವರು ‖

ವರುಣ : (ತೋಂದಿತ್ತತ್ತ) ಸುಧೆಯನು ಸೇವಿಸಿರೆ | ದೈತ್ಯೇಯರ | ಕದನಕಂಜುವ ಭಟರೆ ‖ ಪದುಮನಾ ಭನ ದಯದಲಿ ಖೂಳರನು ಯಮ ಸದನಕಟ್ಟದೆ ಬಿಡೆನು ‖

ದೇವೇಂದ್ರ : (ಏಕ,ಕೋರೆ) ಬಲು ತೋಷವಾಂತೆನು ನೀವೆಂದ ನುಡಿಗೆ | ಕಲಿಗಳು ನಿಶ್ಚಯ ಸಂಗರ ದೊಳಗೆ ‖ ಖಳರ ಭೀತಿಯು ನಮಗೆ ಎಳ್ಳಿನಿತಿಲ್ಲ | ಪದುಮನಾಭನ ದಯವಿಹುದು ಸುಳ್ಳಲ್ಲ ‖

(ದೇವದೂತ ಬಂದು ವಿದ್ಯುನ್ಮಾಲಿಯ ಧಾಳಿಯ ಬಗ್ಗೆ ದೂರುತ್ತಾನೆ)

ದೇವದೂತ : (ಏಕ) ಕೇಳು ಕೇಳಯ್ಯ ನಿರ್ಜರೇಂದ್ರ | ದುಷ್ಟರ ಬಾಧೆ | ಪೇಳಲರಿದು ಸುಗುಣಸಾಂದ್ರ ‖ ಮೇಳವಿಸುತ ಬಲು ಸೈನ್ಯವನಿಲ್ಲಿಗೆ | ದಾಳಿಯನಿಡುತಲಿ ಗೋಳುಗುಟ್ಟಿಸಿದರು ‖

ಅಗ್ನಿ : (ದಿತ್ತತ್ತ) ಬಿಡು ಬಿಡು ಚಿಂತೆಯ ನುಡಿಯನು ಸುರಪನೆ | ಕೊಡು ಎನಗಪ್ಪಣೆಯ ‖ ಕಡು ಧಡಿಗರನಾ ಸದೆಬಡಿಯುತ್ತಲಿ | ನಾಕವ ಪೊರೆಯುವೆನು ‖

ವಾಯು : (ತೋಂದಿತ್ತತ್ತ) ಸುರಪನೆ ನೀನೀ ಅಸುರರ ಪೆಸರನು | ಬೆಸಸದಿರೆನ್ನೊಡನೆ ‖ ಪೊಸತೇನಿವರ್ಗಳ ಅಸುವನು ಕಸಿವುದು | ಉಸಿರೆನೆ ಮುಸಿನಗುತಾ ‖

ವರುಣ : (ತತ್ತತೈ) ಸುರಪತಿ ಇಂತೆನೆ ಕೇಳೀ | ವರ | ವರುಣನು ರೋಷವ ತಾಳಿ ‖ ಖಳ ರಕ್ಕಸರನು ತರಿವೆ | ಮೇಣ್ | ಸುರಸಂಪತ್ತನು ಪೊರೆವೆ ‖

ದೇವೇಂದ್ರ : (ತ್ರಿವುಡೆ–2) ದೂತರೆಂದುದ ಕೇಳಿ ಸುರಪತಿ | ಖಾತಿಯಲಿ ಕಿಡಿ ಸೂಸುತಾಕ್ಷಣ ‖ ಘಾತಿಸುವೆನೀಕ್ಷಣವೆ ಅಸುರರ | ಎನುತ ಪೊರಟ ‖

(ಎಲ್ಲರೂ ಒಂದಾಗಿ ಯುದ್ಧಕ್ಕೆ ಹೊರಡುತ್ತಾರೆ , ಮೊದಲು ರಕ್ಕಸಬಲವನ್ನು ಅಗ್ನಿ ಇದಿರಿಸುತ್ತಾನೆ)

ಅಗ್ನಿ : (ಏಕ) ಅಡಿ ಮುಂದಿಡೆ ಕಾಲ್ಕಡಿವೆನು ನಾಕವ | ನಡರುತ ಸುಮನಸರ ‖ ಕೆಡಹಲು ಹಗೆತನವಡಸಿದೇನು ನೀ | ನುಡಿ ನಿನ್ನಭಿದಾನ ‖

ರಕ್ಕಸ–1 : (ಏಕ) ಶೋಣಿತ ಪುರ ಧೊರೆ ವಿದ್ಯುನ್ಮಾಲಿಯ | ಸೇನಾನಿಯು ನಾನೇ ‖ ಕ್ಷೀಣರೆ ನಮ್ಮಯ ಪಾಳ್ಯ ತರಿದುದಕೆ | ಸೇನೆಯ ತಂದಿಹೆವು ‖

(ಯುದ್ಧ , ಅವರಿಬ್ಬರು ತೆರಳಿದ ಬಳಿಕ ವಾಯು ಮತ್ತು ರಕ್ಕಸ-2 ಬರುತ್ತಾರೆ)

ವಾಯು : (ಏಕ) ನಿಲ್ಲೆಲೋ ರಕ್ಕಸ ನೀನು | ಸುರ | ಬಲವನೆ ಗೆಲಿದರೆ ಏನು ‖ ವೀರ ಮಾರುತನು ನಾನೈ | ನಿನ್ನ | ಗಾರುಗೆಡಿಪೆ ನಾ ನೋಡೈ ‖

ರಕ್ಕಸ–2 : (ಅಷ್ಟ–2) ಮೊದಲು ಬಂದೆಮ್ಮವರ | ಕೊಂದಿಹೆನೆಂಬ | ಮದ ಬೇಡ ಬಿಡುಗಣ್ಣರ ‖ ತ್ರಿದಿವದಿಂದೋಡಿಸು | ತದನಾಳ್ವೆ ಕರೆಸಿಕೋ | ಕದನಕೆ ಸಲಹುವರ ‖

(ಯುದ್ಧ , ವಾಯು ಸೋಲುತ್ತಾನೆ , ವರುಣ ರಕ್ಕಸನನ್ನು ಇದಿರಿಸುತ್ತಾನೆ)

ವರುಣ : (ಮಟ್ಟೆ) ದುರುಳ ಕೇಳೆಲಾ | ದುಡುಕು ಏನೆಲಾ ‖ ಕೊರಳ ಕಡಿವೆ | ನೆನುತ ಸರಳ | ಮಳೆಯ ಗರೆದನು ‖

ರಕ್ಕಸ–2 : (ಮಟ್ಟೆ) ಕಡಿವುತಸ್ತ್ರವಾ | ಖಳನು ರೋಷವಾ ‖ ಒಡನೆ ತಾಳಿ | ವರ ಶರೌಘ | ವೆಚ್ಚನಾಕ್ಷಣ ‖

(ಯುದ್ಧ , ಅವರಿಬ್ಬರು ತೆರಳಿದ ಬಳಿಕ , ದೇವೇಂದ್ರ ಮತ್ತು ವಿದ್ಯುನ್ಮಾಲಿ ಬರುವರು)

ದೇವೇಂದ್ರ : (ಆದಿ,ಏಕ,ಕೋರೆ) ಧಿರುರೇ ಮದಾಂಧ ಕೇಳು | ಶೌರ್ಯದ ಪಿತ್ಥ | ಶಿರಕಡರಿತೆ ಬೊಗಳು ‖ ಸುರರ ಅಂಜಿಸುತ ಎಲ್ಲಿ ಸರಿವೆ ಮುಂದಡಿ ಇಡಲು | ಇರಗೊಡೆ ನಿಲ್ಲು ಎಂದನು ‖

ವಿದ್ಯುನ್ಮಾಲಿ : (ಆದಿ,ಏಕ,ಕೋರೆ) ಸಿಕ್ಕಿದೆಯಾ ಸುರಪಾ | ನಿನ್ನನು ಗೆಲ್ಲ | ತಕ್ಕವನೈಸೆ ಪಾಪ ‖ ಚುಕ್ಕಿಗರೊಡಗೂಡಿ ಸೊಕ್ಕಿ ಯುದ್ಧಕೆ ಮನ | ವಿಕ್ಕಿದೆಯಾ ವ್ಯರ್ಥ ‖

ದೇವೇಂದ್ರ : (ಅಷ್ಟ–2) ಮರುಳು ನಿಶಾಚರನೇ | ನಿನ್ನನು ಗೆಲ್ಲ | ದಿರಲಾ ದಿವಾಚರನೇ ‖ ಧರೆಯರಸರನೆಲ್ಲ | ಮುರಿದ ಹಮ್ಮಿಲಿ ಪ್ರಾಣ | ತೊರೆಯದಿರೆನೆ ಘಮ್ಮನೆ ‖

ವಿದ್ಯುನ್ಮಾಲಿ : (ಅಷ್ಟ–2) ಭುವನ ಕಂಪಿಸುವಂದದಿ | ರಕ್ಕಸ ಘೋರಾ | ಹವನೆಸಗಲು ಬಂಧದಿ ‖ ಸುರಪ ಕಂಗೆಡುವುದ | ಕಂಡೋರ್ವ ಯಕ್ಷನು| ತರಿದ ಖಳನ ಮೋಸದಿ ‖

(ಯುದ್ಧ , ದೇವೇಂದ್ರ ಸೋಲುತ್ತಿರುವಾಗ ಯಕ್ಷನೋರ್ವ ಹಿಂದಿನಿಂದ ಬಂದು ವಿದ್ಯುನ್ಮಾಲಿಯನ್ನು ಕೊಲ್ಲುವನು , ಇದನ್ನು ಕಂಡ ರಕ್ಕಸದೂತ ಅಳುತ್ತಾ ಬರುವನು)

ರಕ್ಕಸದೂತ : (ಭಾಮಿನಿ) ಪರಿಕಿಸುತ ಬಳಿಕೋರ್ವ ಚಾರನು | ತರಹರಿಸಿ ಭಯದಿಂದ ನಡುಗುತ ‖ ಭರದಿ ನಡೆತಂದಾಗ ಮಾಲಿನಿ | ಗೆರಗಿ ಪೇಳಿದನು ‖

(ನಂತರ ಮಾಲಿನಿ ಇದ್ದಲ್ಲಿಗೆ ಬಂದು ವಿಷಯ ತಿಳಿಸುವನು)

ರಕ್ಕಸದೂತ : (ಅಷ್ಟ–1) ಲಾಲಿಸಬೇಕು ತಾಯೇ | ಬಿನ್ನಹಗಳ | ಮಾಲಿನಿ ಗುಣಮಣಿಯೇ ‖ ಕಾಳಗದಲಿ ಸುರಜಾಲವ ಗೆಲಲೆಂದು | ಲೀಲೆಯೊಳೈದಿದ | ನಿನ್ನಯ ಕಾಂತನು ‖

ರಕ್ಕಸದೂತ : (ಅಷ್ಟ–1) ತ್ರಿದಶರನೆಲ್ಲರನೂ | ವಿಕ್ರಮದಿಂದ | ಸದೆದ ನಿನ್ನಯ ಕಾಂತನು ‖ ಅದರ ಮೇಲೈತಂದು ಇದಿರಾಗಿ ಯಕ್ಷನು | ವಧಿಸಿದನಮ್ಮ ನಿ | ನ್ನಾ ರಮಣನನು ‖

(ದೂತ ತೆರಳಿದ ನಂತರ ಮಾಲಿನಿ ಅಳುವಳು)

ಮಾಲಿನಿ : (ಕೋರೆ) ಪತಿಯೇ ನೀ ಮಡಿದೆಯಲ್ಲಾ | ಈ ಪರಿ ಎನ್ನ | ಜತೆಯಗಲಿದೆಯಲ್ಲಾ ‖ ಕ್ಷಿತಿಯೊಳು ನಿನ್ನ ಅಗಲಿ | ಜೀವಿಸಲೆಂತು | ವ್ಯಥೆಯ ಯಾರೊಡನೆನ್ನಲಿ ‖

ಮಾಲಿನಿ : (ಕೋರೆ) ಗೆಲಿದೆಲ್ಲ ತ್ರಿದಶರನು | ನಾಕದಿ ರಣ | ಕಲಿಯಾಗಿ ಮೆರೆದು ನೀನು ‖ ಅಳಿವರೆ ಯಕ್ಷನಲಿ | ಕುಂದಿತೆ ಭುಜ | ಬಲವು ರಣಾಗ್ರದಲಿ ‖

ಮಾಲಿನಿ : (ಭಾಮಿನಿ) ಅತ್ತು ಫಲವೇನಿನ್ನು ಸುಮ್ಮನೆ | ಸತ್ತವರು ಜೀವಿಪರೆ ಸಮರ ಸ ‖ ಮರ್ಥನಾಗಿಹ ತರಳ ಮಹಿಷಾಸುರಗೆ ಹದನಗಳ ‖ ಬಿತ್ತರಿಸಿ ಹದನಗಳ ಸುಮನಸ | ಮೊತ್ತವನು ಸದೆಬಡಿದು ನಾಕವ ‖ ಅರ್ತಿಯಲಿ ವಶಗೈವೆನೆನುತಲಿ ಕರೆದಳಾ ಮಗನಾ ‖

(ಮಾಲಿನಿಯು ಮಹಿಷಾಸುರನನ್ನು ಕರೆಯುವಳು , ಮಹಿಷಾಸುರನು ರಂಗಸ್ಥಳಕ್ಕೆ ಬಂದ ನಂತರ)

ಮಹಿಷಾಸುರ : (ಏಕ) ಮಾತೆಯೆ ದುಗುಡವಿದೇನು | ತವ | ಜಾತನು ನಾನಿಹೆ ಕೇಳು ‖ ಏತರ ಚಿಂತೆಯು ಪೇಳು | ಪರಿ | ಹರಿಪೆ ನಾ ನಿಮ್ಮಯ ಸುತನು ‖

ಮಹಿಷಾಸುರ : (ಜಂಪೆ-2) ಧಾರಿಣಿಯ ಮೇಲೆ ಕಣ್ಣೀರ ಸುರಿಸುತಲಿಂತು | ಭೂರಿ ಶೋಕಿಸುವು ದೇನಮ್ಮಾ ‖ ಯಾರಿಂದ ಒದಗಿತೀಪರಿಯ ಚಿಂತೆಯು ನಿಮಗೆ | ಕಾರಣವ ಪೇಳು ಪೇಳಮ್ಮ ‖

ಮಹಿಷಾಸುರ : (ಜಂಪೆ-2) ಹರಿಯೊ ಶಂಕರನೊ ಮೇಣ್ ಸರಸಿಜೋದ್ಭವನೊ ಈ | ಪರಿ ಕಷ್ಟವಿ ತ್ತವರು ನಿಮಗೆ ‖ ಧುರ ಧೀರನಾಗಿರುವ ತರಳ ನಾನಿರುತಿರಲು |ನೆರೆ ಭೀತಿ ಯಾಕೆ ಮನದೊಳಗೆ ‖

ಮಾಲಿನಿ : (ಏಕ,ಕೋರೆ) ಪೇಳಲೇನದಯ್ಯೊ ಮುದ್ದು | ಕಂದ ಕಂದ | ನಮ್ಮ | ಬಾಳುವೆ ತೀರಿ ದುದು ಮಗನೆ | ಕಂದ ಕಂದ ‖ ಮೇಲು ಲೋಕವನ್ನು ಬಯಸಿ | ಕಂದ ಕಂದ | ಮೊನ್ನೆ | ಕಾಳಗಕ್ಕೆ ಸೈನ್ಯವೆರಸಿ | ಕಂದ ಕಂದ ‖

ಮಾಲಿನಿ : (ಏಕ,ಕೋರೆ) ಸುರರನೆಲ್ಲ ಗೆಲಿದು ಬಳಿಕ | ಕಂದ ಕಂದ | ತಾನು | ಮೆರೆಯುತಿರಲು ನಾಕದೊಳಗೆ | ಕಂದ ಕಂದ ‖ ಭರದೊಳೋರ್ವ ಯಕ್ಷನೈದಿ | ಕಂದ ಕಂದ | ರಣದಿ | ತರಿದನಂತೆ ನಿನ್ನ ಪಿತನ | ಕಂದ ಕಂದ ‖

ಮಹಿಷಾಸುರ : (ಏಕ) ಜನನಿಯ ವಚನಾಲಿಸಿ ಮಹಿಷನು | ತ್ರಿಣಯನ ತೆರದಿಂದ ‖ ಕನಲುತ ತನ್ನಯ ಮನದಲಿ ಘರ್ಜಿಸಿ | ಮಣಿದಾಕೆಯೊಳೆಂದ ‖

ಮಹಿಷಾಸುರ : (ಏಕ) ಮಾತೆ ನೀ ಲಾಲಿಸು ತಾತನ ಕೊಲಿಸಿದ | ಧೂರ್ತರ ರಣಮುಖದಿ ‖ ಘಾತಿಸಿ ನಾಕವ ಪ್ರೀತಿಯೊಳಾಳುವೆ | ಖ್ಯಾತನೆನಿಸಿ ಜಗದಿ ‖

ಮಹಿಷಾಸುರ : (ಏಕ) ಯಕ್ಷರ ಗಿಕ್ಷರ ಲಕ್ಷಕೆ ತರುವೆನೆ | ಮುಕ್ಕಣ್ಣನೆ ಬರಲಿ ‖ ಸೊಕ್ಕ ಮುರಿವೆ ಯಾತಕ್ಕೆ ಭಯವು ಕಳು | ಹೀ ಕ್ಷಣ ಪರಸುತಲಿ ‖

ಮಾಲಿನಿ : (ಭಾಮಿನಿ) ತನಯನಾಡಿದ ನುಡಿಗೆ ಮಾಲಿನಿ | ಮನದಿ ಹರುಷವನಾಂತು ನುಡಿದಳು | ಅನಿಮಿಷರ ಗೆಲಬಹುದು ಸಮರದಿ ನಿನಗೆ ಘನವಲ್ಲ ‖ ವನಜನಾಭನು ಬರುವ ಕೃತಕದಿ | ಅನವರತ ಸುಮನಸರ ಪಕ್ಷದಿ | ನಿನಗೆ ಪೇಳುವೆನೊಂದು ವಿಧಿಯಲಿ ಪಡೆದು ವರಗಳನು ‖

(ಮಾಲಿನಿಯು ಆಶೀರ್ವದಿಸಿ ತೆರಳುವಳು , ಮಹಿಷನು ತಪಸ್ಸಿಗೆ ಹೊರಡುವನು)

ಮಹಿಷಾಸುರ : (ರೂಪಕ) ಮಾತೆಗೆ ಮಣಿದು ವಿಖ್ಯಾತ ಮಹಿಷನು ವಿ | ಧಾತನ ತಪಗೈವೆನೆನುತ‖ ಆ ತತೂಕ್ಷಣದಿ ಪೊರಟೈತಂದು ಪುಷ್ಕರ | ಕ್ಷೇತ್ರವ ಪೊಗುತಲೆ ಬಳಿಕ ‖

ಮಹಿಷಾಸುರ : (ರೂಪಕ) ಬಂದು ಸಲಿಲದಿ ಮಿಂದು ನಿಂದೊಂಟಿ ಕಾಲಲಿ | ಹೊಂದಿಸಿ ದೃಷ್ಟಿಯ ಬಳಿಕ ‖ ಚಂದದಿ ನಾಸಿಕಾಗ್ರದೊಳು ಇರಿಸುತ್ತ ಅರ | ವಿಂದಭವನನ್ನು ಧ್ಯಾನಿಸಿದ ‖

ಮಹಿಷಾಸುರ : (ಚೌತಾಳ) ಶಾರದೆ ರಮಣ | ಸೇರಿದೆ ಚರಣ ‖ ಬೀರುತ ಕರುಣ | ತೋರೋ ದರುಶನ ‖

ಮಹಿಷಾಸುರ : (ತ್ರಿವುಡೆ-2) ಹಲವು ವಿಧದಲಿ ತಪವನೆಸಗಲು | ನಳಿನಸಂಭವ ಒಲಿಯದಿರಲಾ ‖ ಖಳನು ಕಂಠವ ಕಡಿವೆನೆನುತಲಿ | ನಿಲಲಿಕಾಗ ‖

(ಬ್ರಹ್ಮ ಪ್ರತ್ಯಕ್ಷನಾಗುತ್ತಾನೆ)

ಬ್ರಹ್ಮ : (ಏಕ) ಮೆಚ್ಚಿದೆ ಮೆಚ್ಚಿದೆನಿದಕೆ | ನಿನ್ನ|ಹೆಚ್ಚಿನ ಭಕ್ತಿಯ ತಪಕೆ ‖ ನಿಶ್ಚಯವಿದು ನಿನ್ನಿಚ್ಛೆ ಏನೆಂಬುದ | ಉಚ್ಚರಿಸಲು ನಾನೀಕ್ಷಣ ಕೊಡುವೆನು ‖

ಬ್ರಹ್ಮ : (ಏಕ) ಬಿಡು ಬಿಡು ನೀ ಬಿಡು ತಪವ | ನಾ | ಕೊಡುವೆನು ಕೇಳಿದ ವರವ ‖ ತಡಮಾಡದೆ ನುಡಿ ನುಡಿ ಮನದಿರವೆನೆ | ಅಡಿಗೆರಗುತ್ತಲೆ ನುಡಿದನು ವಿಧಿಯಲಿ ‖

ಮಹಿಷಾಸುರ : (ಜಂಪೆ-2) ದೀನಜನ ಉದ್ಧರಣ ವಾಣಿದೇವಿಯ ರಮಣ | ನೀನೊಲಿದು ಕೇಳು ಬಿನ್ನಪವನೆಲೆ ದೇವ ‖ ಕ್ಷೋಣಿ ಮೂರರೊಳಿರ್ಪ ಯೋನಿಸಂಜಾತರಿಂ | ಹಾನಿ ಎನಗಿಲ್ಲ ವೆಂದೆನುತಿರ್ಪ ವರವ ‖

ಮಹಿಷಾಸುರ : (ಜಂಪೆ-2) ಹರಿಹರಬ್ರಹ್ಮರಾಗಿರುವ ನಿಮ್ಮಲಿ ಸಹಿತ | ಮರಣಭಯ ಕೊಳಗಾಗ ದಂದಲಿ ಮುಂದೆ ‖ ಶರಣನೆನ್ನುವ ಪ್ರೇಮವಿರಲಾಗಿ ವರಗಳನು | ಕರುಣಿಸುತ ಪೊರೆಯೊ ನೀ ಒಲಿದೆನ್ನ ತಂದೆ ‖

ಬ್ರಹ್ಮ : (ಜಂಪೆ-2) ನುಡಿದು ತಪ್ಪುವುದುಂಟೆ ಬಿಡುಮನದ ಸಂಶಯವ | ದೃಢವಾಗಿ ಕೊಟ್ಟೆ ನಾ ನಿನ್ನ ನಿಶ್ಚಯದಿ ‖ ಪೊಡವಿಯಲಿ ಕೀರ್ತಿಯನು ಪಡೆಯೆನುತ ಕಮಲಭವ | ನುಡಿಯುತಂತರ್ಧಾನ ತಳೆದನಾ ಕ್ಷಣದಿ ‖

(ಬ್ರಹ್ಮ ತೆರಳಿದ ನಂತರ)

ಮಹಿಷಾಸುರ : (ತ್ರಿವುಡೆ-2) ವಾಣಿರಮಣನ ವರವ ಸಾಧಿಸಿ | ದಾನವನು ಸಂತಸದಿ ನಲಿದನು ‖ ಚೂಣಿಯಲಿ ಲೆಕ್ಕಿಪೆನೆ ನಾ ಗೀ | ರ್ವಾಣ ಕುಲವ ‖

ಮಹಿಷಾಸುರ : (ತ್ರಿವುಡೆ-2) ಹರಿಯ ಕಪಟವು ನಡೆಯದಿನ್ನಾ | ಸರಸಿಜಾಸನ ಇತ್ತ ವರದಲಿ ‖ ಸುರರ ಸದೆಬಡಿಯುತ್ತ ನಾಕದಿ | ಮೆರೆವೆನಿಂದು ‖

ಮಹಿಷಾಸುರ : (ತ್ರಿವುಡೆ-2) ಹೊಡಕೊಳುತ ಭುಜಗಳನು ತೋಷದಿ | ಕಡು ಮದವ ತಾಳುತ್ತ ಮನದಲಿ ‖ ನಡೆದನಾತನು ಶೋಣಿತಾಪುರ | ದೆಡೆಗೆ ಮುದದಿ ‖

(ಮಹಿಷಾಸುರ ತೆರಳಿದ ನಂತರ , ಶಂಖಾಸುರ, ದುರ್ಗಾಸುರ, ಚಿಕ್ಷುರಾಸುರ ಮತ್ತು ಬಿಡಲಾಸುರರ ಪ್ರವೇಶ)

ಶಂಖಾಸುರ : (ತ್ರಿವುಡೆ-2) ಹರಿಯ ಭೀತಿಯೊಳಿತ್ತ ಗಿರಿ ಕಂ | ದರದೊ ಳಿರುತಿಹ ಶಂಖದುರ್ಗಾ ‖ ದ್ಯರುಗಳೆಲ್ಲರು ಹದನವನ್ನಿದ | ನರಿಯುತಾಗ ‖

ದುರ್ಗಾಸುರ : (ತ್ರಿವುಡೆ-2) ಕೇಳಿದಿರೆ ನೀವೆಲ್ಲ ದಾನವ | ರೇಳಿಗೆಯನೇನೆಂಬೆ ಇಂದಿಲಿ‖ ಮಾಲಿನಿಗೆ ಜನಿಸಿರುವ ನೆರೆ ಕ | ಟ್ಟಾಳು ಮಹಿಷಾ ‖

ಚಿಕ್ಷುರಾಸುರ : (ತ್ರಿವುಡೆ–2) ಸರಸಿಜೋದ್ಭವನನ್ನು ಮೆಚ್ಚಿಸಿ | ಧರೆಯ ಯೋನಿಜರಿಂದ ಮತ್ತಾ ‖ ಹರಿಹರಾದಿಗಳಿಂದ ಮರಣವು | ದೊರಕದಂತೆ ‖

ಬಿಡಲಾಸುರ : (ತ್ರಿವುಡೆ–2) ಪಡೆದಿರಲು ವರಗಳನು ಭರದಲಿ | ನಡೆದು ನಾವಿನ್ನವನ ಪಕ್ಷದಿ ‖ ಬಡಿದು ಸುಮನಸರನ್ನು ನಾಕವ | ಪಡೆಯಬಹುದು ‖

(ಅವರಿಬ್ಬರು ತೆರಳಿದ ಬಳಿಕ ಮುಂದಿನ ಪದ್ಯಕ್ಕೆ ಮಹಿಷಾಸುರನು ಶೋಣಿತಕ್ಕೆ ಬಂದು ಓಲಗವೀಯುತ್ತಾನೆ)

ಮಹಿಷಾಸುರ : (ತ್ರಿವುಡೆ–2) ಭರಿತ ಹರುಷದೊಳಿತ್ತ ಮಹಿಷಾ | ಸುರನು ವರಬಲವಾಂತು ಶೋಣಿತ ‖ ಪುರಕೆ ಬಂದೋಲಗವನಿತ್ತನು | ಮರಳಿ ತಾನು ‖

(ಅಷ್ಟರಲ್ಲಿ ಶಂಖ, ದುರ್ಗ, ಚಿಕ್ಷುರ, ಬಿಡಲಾಸುರರು ಬರುತ್ತಾರೆ)

ಮಹಿಷಾಸುರ : (ರೂಪಕ) ನಡೆತಂದ ದೈತ್ಯರ ಗಡಣವನೀಕ್ಷಿಸಿ | ಕಡು ಹರುಷದಲಿ ಮಹಿಷಾ ‖ ಅಡರಿಸಿ ಪೀಠವ ಬಿಡದುಪಚರಿಸುತ್ತ | ನುಡಿದ ನೀವ್ಯಾರೆಂಬುದನ್ನು ‖

ಮಹಿಷಾಸುರ : (ರೂಪಕ) ಒರೆಯಬೇಕೆನಗೆ ನೀವ್ ಹಿತರೊ ಮೇಣ್ ಅಹಿತರೊ | ಹರಿತಂದ ಹದನವದೇನು ‖ ಮರೆಮಾಜದೆಲ್ಲವ ಒರೆಯಬೇಕೆಂದೆನೆ | ಅರುಹಿದರವರ ಕಷ್ಟವನು ‖

ಶಂಖಾಸುರ : (ರೂಪಕ) ಲಾಲಿಪುದಾದರೆ ಮಾಲಿನಿ ಸುಕುಮಾರ | ಪೇಳುವ ನುಡಿ ಶಂಖಾಸುರನ ‖ ಜಾಲವಲ್ಲಿವ ದುರ್ಗಾಚಿಕ್ಷುರನದಕೊ ಬಿ | ಡಾಲಾದಿ ದೈತ್ಯರ ಗಡಣ ‖

ದುರ್ಗಾಸುರ : (ರೂಪಕ) ಹಿರಿಯರಾವೆನುತಲೆ ಸುರಲೋಕ ಬಯಸುತ್ತ | ಧುರದಿ ಗೆಲಿದು ನಾಕವನ್ನು ‖ ಮೆರೆಯಲು ನಾಕದಿ ಹರಿಯೈದಿ ಕೃತಕದಿ | ತರಿದ ಚಕ್ರದಿ ನಮ್ಮವರನು ‖

ಚಿಕ್ಷುರಾಸುರ : (ರೂಪಕ) ಗಿರಿಗಹ್ವರಗಳಲಿ ಮರೆಯಾಗಿ ನಾವಿರ | ಲರಿತು ನಿನ್ನಯ ವಾರ್ತೆಗಳನು‖ ಹರಿತಂದೆವಿಲ್ಲಿಗೆ ಭರದಿ ನಿನ್ನೊಡಗೊಂಡು | ಸುರರನ್ನು ಗೆಲಿದು ನಾಕವನು ‖

ಬಿಡಲಾಸುರ : (ರೂಪಕ) ಧುರಧೀರ ನೀನಾಳುತಿರಬೇಕು ನಿನ್ನಾಜ್ಞೆ|ವೆರಸಿ ನಾವಿಹೆವು ನಾಕದೊಳು‖ ಹಿರಿಯವರಾಗಿ ನಾವಿರುತಿರಲಿಂದಿಗೆ | ಸುರರು ಮೆರೆವುದನುಚಿತವು ‖

ಮಹಿಷಾಸುರ : (ಏಕ) ಎಂದಾ ದನುಜರ ನುಡಿಯನು ಲಾಲಿಸಿ | ಅಂದು ಕನಲಿ ಮಹಿಷ ‖ ಸಂದೇಹವ ಬಿಡಿ ವೃಂದಾರಕರುಗ | ಳಂದಗೆಡಿಪ ಸಹಸ ‖

ಮಹಿಷಾಸುರ : (ಏಕ) ವಿಧಿಯ ವರದ ಬಲವೆನಗಿರೆ ಸಮರದಿ | ತ್ರಿದಶರ ಬಗೆಯುವೆನೆ ‖ ಸದೆದಾ ಸುರಸಂಪದಗಳ ಪಡೆಯುವೆ | ವಿಧುಧರ ಪದದಾಣೆ ‖

ಶಂಖಾಸುರ : (ಏಕ) ಬರುವೆವು ನಿನ್ನೊಡ ತೆರಳುವೆಯಾದರೆ | ಸುರರನು ಲೆಕ್ಕಿಪೆವೆ ‖ ಮುರಿದಿಕ್ಕುತ ತ್ರಿದಶರ ನಾಕದಿ ನೀ | ಮೆರೆಯುತಿಹುದು ಪ್ರಭುವೆ ‖

ದುರ್ಗಾಸುರ : (ಏಕ) ಹರಿಗಳುಕಿದೆವಾವ್ ಹೊರತಾ ಸುಮನಸ | ರನು ಬಗೆವವರಲ್ಲ ‖ ಪೊರಡುವುದೀಕ್ಷಣ ಸುರಲೋಕಕೆ ನಾವ್ | ಭರದಲಿ ಖಳಪಾಲ ‖

ಮಹಿಷಾಸುರ : (ಏಕ) ಲೇಸಾಡಿದಿರೆಂದೆನ್ನುತಲಾ ಮಹಿ | ಷಾಸುರ ಗರ್ಜಿಸುತ ‖ ಆ ಸುಭಟರನೊಡ ಗೊಂಡಾ ವಾರಿಧಿ | ಘೋಷದಿ ಪೊರಮಡುತ ‖

(ಎಲ್ಲರೊಂದಾಗಿ ಸ್ವರ್ಗಕ್ಕೆ ಧಾಳಿ ಇಡುತ್ತಾರೆ , ಬಾಗಿಲಲ್ಲಿ ದೇವದೂತನು ತಡೆಯುತ್ತಾನೆ , ಹಗ್ಗದಿಂದ ಮಹಿಷನನ್ನು ಕಟ್ಟಲು ಪ್ರಯತ್ನಿಸುತ್ತಾನೆ , ದೇವೇಂದ್ರ ಕುಳಿತಲ್ಲಿಗೆ ದೇವದೂತ ಬರುತ್ತಾನೆ)

ದೇವೇಂದ್ರ : (ತ್ರಿವುಡೆ–1) ಇತ್ತಲಮರಾವತಿಯೊಳೊಂದಿನ | ವೃತ್ರಹರನೋಲಗದೊಳೊಪ್ಪಿರೆ ‖ ದೂತನೋರ್ವನೈತಂದರುಹಿದನು | ಪೊಸತು ವಾರ್ತೆಗಳ ‖

ದೇವದೂತ : (ಏಕ) ಲಾಲಿಸಿ ಕೇಳು ಬಿನ್ನಪವ | ನಮ್ಮೊಡೆಯ ಮಘವ | ಖೂಳ ದಾನವರು ಮುತ್ತಿ ಪುರವ ‖ ಧಾಳಿ ಇಟ್ಟು ಸುರ |ಜಾಲವ ಪರಿಪರಿ| ಗೋಳುಗುಟ್ಟಿಸುವರು|ಪೇಳುವುದೇನದ ‖

ದೇವದೂತ : (ಏಕ) ಮಾಲಿನಿ ಸುಕುಮಾರನಂತೆ |ಶೋಣಿತಪುರ| ವಾಳುತ್ತಲಿರುವ ಮಹಿಷನಂತೆ ‖ ಕಾಳಗದಲಿ ಪಿಂ |ದೋಡಿದ ದೈತ್ಯರ| ಜಾಲವ ನೆರಹಿಸಿ| ಕಾಳಗಕ್ಕೈದಿದ ‖

ದೇವೇಂದ್ರ : (ತ್ರಿವುಡೆ–2) ಚರರ ನುಡಿಯನು ಕೇಳಿದಾಕ್ಷಣ | ಉರಿಯ ಸೂಸುತ ಪಾಕಶಾಸನ ‖ ನೆರೆದಿರುವ ದಿಕ್ಪಾಲರೊಳು ತಾ | ನೊರೆದನಾಗ ‖

ದೇವೇಂದ್ರ : (ತ್ರಿವುಡೆ–2) ಕೇಳಿದಿರೆ ನೀವೆಲ್ಲವಿಂದಿಲಿ | ಮಾಲಿನಿಯ ಸುಕುಮಾರ ಮಹಿಷನು ‖ ಕಾಳಗಕೆ ನಡೆತಂದ ನೆರೆ ಕ | ಟ್ಟಾಳುತನದಿ ‖

ಅಗ್ನಿ : (ಅಷ್ಟ–2) ಎನಲೆಂದರೊಡನೆ ಜೀಯ | ಸಂಗರಕೆಂದು| ಇನಿತ್ಯೆದ ಖಳತತಿಯ ‖ ಅನುವರದಲಿ ಸಾಕೆಂ | ದೆನಿಸುವೆನಿಂದಿಲಿ| ಅನುಮಾನವ್ಯಾತಕಯ್ಯಾ ‖

ವಾಯು : (ಏಕ) ಬರಲೀ ಖೂಳರ ಮೇಳ | ಅದ | ಗಣಿಸುವರಾರೂ ಹೇಳ ‖ ವಾಯುವ್ಯದಿ ಬರಗೊಡೆನು | ಬರೆ | ದೂರೊಯ್ಯುತ ಹಾರಿಪೆನು ‖

ವರುಣ : (ಅಷ್ಟ–2) ಅಡಿಗಡಿಗೀತೆರದಿ | ನಾಕದ ಭಾಗ್ಯ| ಪಡೆಯಲು ಸಮರಕ್ಕೈದಿ ‖ ಮಡಿವರು ದೈತ್ಯರು | ತೊಡಗಿ ಸಂಗ್ರಾಮವ | ಬಿಡುಯೋಚನೆಯ ಮನದಿ ‖

ಕುಬೇರ : (ಅಷ್ಟ–2) ಮಹಿಷನ ಮಾತಿರಲಿ | ಸಂಗರಕೆಂದು| ಅಹಿಬೂಷಣನೆ ಬರಲಿ ‖ ಸಹಸದಿ ಹಿಮ್ಮೆಟ್ಟಿ | ಸುವೆವು ಪೊರಡಲಿ ಸ | ನ್ನಿಹಿತವಾಗುತಲಿಂದಿಲಿ ‖

ದೇವೇಂದ್ರ : (ಅಷ್ಟ–2) ಲೇಸನಾಡಿದಿರೆನ್ನುತ | ಆ ಕ್ಷಣದಲ್ಲಿ| ವಾಸವ ಗಜವೇರುತ್ತ ‖ ಆ ಸುಭಟ ರನೊಡ | ಗೊಳ್ಳುತ್ತ ವಾರಿಧಿ | ಘೋಷದಿ ಪೊರಮಡುತ ‖

(ಯುದ್ಧಕ್ಕೆ ಹೊರಡುತ್ತಾರೆ , ಮೊದಲು ಅಗ್ನಿ ಮತ್ತು ಬಿಡಲಾಸುರ ಇದಿರಾಗುತ್ತಾರೆ)

ಅಗ್ನಿ : (ಏಕ) ಫಡ ದಾನವ ಖಳ ಗಡಣವ ಕೂಡುತ | ಕಡುಗಲಿಗಳ ತೆರದಿ ‖ ಅಡರಿ ನಾಕವನು ತೊಡಗಿದ್ಯಾಕೆ ರಣ | ನುಡಿ ನೀನತಿ ಜವದಿ ‖

ಬಿಡಲಾಸುರ : (ಏಕ) ಬಿಡುಗಣ್ಣರ ಸದೆಬಡಿದೀ ನಾಕವ | ಒಡೆಯ ಮಹಿಷನಿಂಗೆ ‖ ದೃಢಗೊಳಿಸಲು ನಾವ್ ನಡೆತಂದಿಹೆವೈ | ಕೆಡದಿರಿ ಧುರದೊಳಗೆ ‖

(ಯುದ್ಧ , ಅಗ್ನಿ ಸೋಲುತ್ತಾನೆ , ವಾಯು ಮತ್ತು ಚಿಕ್ಷುರಾಸುರ ಇದಿರಾಗುತ್ತಾರೆ)

ವಾಯು : (ಏಕ) ಮರುಳನೆ ನಿನ್ನಂತಿರುವ ಖಳರು ಸುರ | ಪುರವನು ಬಯಸುತಲಿ ‖ ಧುರಕ್ಕೈತರುತಲೆ ಹರಣವ ನೀಗಿದ | ರರಿತುಕೊ ಪೂರ್ವದಲಿ ‖

ಚಿಕ್ಷುರಾಸುರ : (ಏಕ) ನೀರಮನೆಯೊಳಿಹ ಚೋರನ ಕೃತಕದಿ | ಪೂರ್ವಾಮರರನ್ನು ‖ ಗಾರುಗೆಡಿಸಿದ ಪೌರುಷವೆಲ್ಲವ | ತೋರ್ಯೆ ನೀ ಮುನ್ನ ‖

(ಯುದ್ಧ , ವಾಯು ಸೋಲುತ್ತಾನೆ , ವರುಣ ಮತ್ತು ದುರ್ಗಾಸುರ ಇದಿರಾಗುತ್ತಾರೆ)

ವರುಣ : (ಮಟ್ಟೆ) ಎಲ್ಲಿ ಪೋಪೆ ಎಲವೊ ದುರುಳ | ನಿಲ್ಲು ರಣದಿ ಸುರರನೆಲ್ಲ ‖ ಚೆಲ್ಲಿ ಬಡಿದ ಗರ್ವವ ಎ | ನ್ನಲ್ಲಿ ತೋರಿಸು ‖

ದುರ್ಗಾಸುರ : (ಮಟ್ಟೆ) ಬಲ್ಲೆ ಸುರರ ಕಾರ್ಯ ಸಮರ | ದಲ್ಲಿ ಕಂಡು ದಿತಿಕುವರರ ‖ ನಿಲ್ಲದೋಡಿ ಪೋಗಿ ವಿಪಿನ | ದಲ್ಲಿ ಬಾಳ್ವುದ ‖

ವರುಣ : (ಮಟ್ಟೆ) ಮರುಳೆ ಮೊದಲು ರಣಕೆ ಬಂದು | ಧುರದೊಳೆಮ್ಮೊಳ್ ಬವಣೆಗೊಂಡು ‖ ಗಿರಿ ಗುಹೆಗಳ ಸೇರಿದುದನು | ಮರೆತು ಬಂದೆಯ ‖

ದುರ್ಗಾಸುರ : (ಮಟ್ಟೆ) ಹರಿಯ ಕಪಟದಿಂದ ನಮ್ಮ | ಧುರದಿ ಗೆಲಿದೆವೆಂಬ ಹಮ್ಮ ‖ ಮೆರೆಸು ನೋಳ್ಪೆನದನು ಕೇಳು | ಧುರದ ಮಧ್ಯದಿ ‖

(ಯುದ್ಧ , ವರುಣ ಸೋಲುತ್ತಾನೆ , ಕುಬೇರ ಮತ್ತು ಶಂಖಾಸುರ ಇದಿರಾಗುತ್ತಾರೆ)

ಕುಬೇರ : (ತ್ರಿವುಡೆ–2) ಭಳಿರೆಲವೊ ಧನುಜಾಧಮನೆ ಕೊಳು | ಗುಳಕೆ ನಡೆತಂದೆಮ್ಮೊಳೀಪರಿ ‖ ಅಳಿವೆಯಾತಕೆ ಬಿಟ್ಟು ಛಲವನು | ತೊಲಗು ಹಿಂದೆ ‖

ಶಂಖಾಸುರ : (ತ್ರಿವುಡೆ–2) ಬಲವಿರೋಧಿಯ ತೋರು ಸುಮ್ಮನೆ|ಅಳಿವೆಯಾತಕೆ ನಿಂದು ಸಮರಕೆ‖ ಛಲವು ನಮ್ಮಲಿ ಮೆರೆಯದೆಂದಿಗು | ಕೊಳುಗುಳದಲಿ ‖

ಕುಬೇರ : (ತ್ರಿವುಡೆ–2) ಜಗಲಿಯನು ತಾನೇರಲರಿಯದೆ | ಗಗನವನು ಬಯಸುವುದು ಯೋಗ್ಯವೆ ‖ ನಗದಿಹರೆ ಕೇಳೆನ್ನ ಗೆಲು ನೀ | ಹಗರಣದಲಿ ‖

ಶಂಖಾಸುರ : (ತ್ರಿವುಡೆ–2) ಕೆಡದಿರೆಂದಾಡಿದರೆ ನೀ ಮದ | ವಡರಿ ಸಮರಕೆ ಬಂದೆ ಸುಮನಸ ‖ ಗಡಣವನು ಸದೆಬಡಿದು ನಾಕವ | ಪಡೆವೆ ನೋಡು ‖

(ಯುದ್ಧ , ಕುಬೇರ ಸೋಲುತ್ತಾನೆ , ಮಹಿಷಾಸುರ ಮತ್ತು ದೇವೇಂದ್ರ ಇದಿರಾಗುತ್ತಾರೆ)

ಮಹಿಷಾಸುರ : (ಆದಿ,ಏಕ,ಕೋರೆ) ಸುರಪನೆಂಬವನೆ ನೀನು | ಗಜವನೇರಿ| ಧುರಕಿದಿರಾದವನು ‖ ತರವಲ್ಲ ನಾಕವ ಚರಣಕೊಪ್ಪಿಸಿದರೆ | ಕರುಣದಿ ರಕ್ಷಿಪೆನು ‖

ದೇವೇಂದ್ರ : (ಆದಿ,ಏಕ,ಕೋರೆ) ಎಲವೊ ಮಹಿಷನೆ ಕೇಳು | ಶತಾಧ್ವರ| ಗಳ ಗೈದು ಪೂರ್ವದೊಳು ‖ ವಲಿಸಿದೆ ನಾಕವ ಬಯಸುತ್ತ ಸುಮ್ಮನೆ | ಅಳಿಯುವುದ್ಯಾಕೆ ಹೇಳು ‖

ಮಹಿಷಾಸುರ : (ಅಷ್ಟ–2) ಜನಕನ ಕೊಂದಿರುವ | ದ್ರೋಹಿಯು ನೀನೆಂ| ದರಿತಿರುವೆನು ಮಘವ‖ ಅನುವರದೊಳು ನಿನ್ನ ಕ್ಷಣದಿ ಭಂಗಿಸಿದಪೆ | ಬಿನುಗನೆ ಕೊಡು ಧುರವ ‖

ದೇವೇಂದ್ರ : (ಅಷ್ಟ–2) ನಿನ್ನಂಥ ದಾನವರು | ನಾಕದ ಭಾಗ್ಯ | ವನ್ನು ಬಯಸಿದವರು ‖ ಮುನ್ನ ಸಂಗರಕ್ಕೈದಿ ಮಣ್ಣುಗೂಡಿಹ ವಾರ್ತೆ | ಯನ್ನರಿಯುತ್ತ ಸಾರು ‖

(ಯುದ್ಧ , ದೇವೇಂದ್ರ ಸೋಲುತ್ತಾನೆ , ಮಹಿಷಾಸುರನು ಗದ್ದುಗೆ ಏರುತ್ತಾನೆ , ಡಂಗುರ ಹೊಡೆಸುತ್ತಾನೆ)

ಮಹಿಷಾಸುರ : (ಏಕ) ವಾಸವ ಮುಖ್ಯರ ಗೆಲಿದು | ಮಹಿ | ಷಾಸುರ ಸಮರದೊಳಂದು ‖ ಆಸನವನ್ನೇರಿದನು | ಖಳ | ಹೊಯ್ಸಿದ ಡಂಗುರಗಳನು ‖

(ಮಹಿಷಾಸುರನು ತೆರಳಿದ ಮೇಲೆ ದೇವೇಂದ್ರ ಮತ್ತು ದೇವತೆಗಳು ಬರುತ್ತಾರೆ)

ದೇವೇಂದ್ರ : (ರೂಪಕ) ಸುರಥ ವೈಶ್ಯರು ಕೇಳಿ | ದುರುಳರೀ ಪರಿಯಲ್ಲಿ | ಮೆರೆಯುತ್ತಲಿರಲು ನಾಕದಲಿ ‖ ಸುರರ ತಾನೊಡಗೊಂಡು | ಪುರುಹೂತನಾಕ್ಷಣ | ಚರಿಸುತ್ತ ಗಿರಿ ಕಾನನದಲಿ ‖

ದೇವೇಂದ್ರ : (ರೂಪಕ) ಅರಿತೆಂದನಾಕ್ಷಣ | ಮರುಗಿ ಮಾಡುವುದೇನು | ಸರಸಿಜೋದ್ಭವನ ಪಾದದಲಿ ‖ ಅರಿಕೆಗೈದರೆ ಪೋಗಿ | ಕರುಣಸಾಗರ ನಮ್ಮ | ಪೊರೆಯದೆ ಬಿಡನು ಕೃಪೆಯಲಿ ‖

(ದೇವೇಂದ್ರ ಮತ್ತು ದೇವತೆಗಳು ಬ್ರಹ್ಮನಲ್ಲಿಗೆ ಬರುತ್ತಾರೆ)

ದೇವೇಂದ್ರ : (ಅಷ್ಟ–1) ಪೊರೆಯಬೇಕೆಲೆ ವಾಣಿನಾಥ | ಅವ | ಧರಿಸು ನೀ ಕಮಲ ಸಂಜಾತ ‖ ದುರುಳರಟ್ಟುಳಿಯನ್ನು | ಒರೆಯುವುದಿನ್ನೇನು| ಧರೆಯೆಂತು ಹೊರುವಳೊ| ಹರನೊಬ್ಬ ಬಲ್ಲನು ‖

ಬ್ರಹ್ಮ : (ಏಕ,ಕೋರೆ) ಅರಿತೆನರಿತೆ ನಾ ದುರುಳರ ಬಾಧೆಯ|ಒರೆಯುವುದ್ಯಾತಕೆ ಎನ್ನಲ್ಲಿ‖ ಮರೆಯಲ್ಲವು ನಾ ವರಗಳನಿತ್ತಿಹೆ|ವಿರಚಿಸೆ ತಪವನು ಮೊದಲಲ್ಲಿ‖ಧರೆ ಮೂರರೊಳಿಹ ವರಯೋನಿಜರಿಂ | ಮರಣವು ಬಾರದ ತೆರದಲ್ಲಿ‖ ಹರಿಹರಬ್ರಹ್ಮಾದ್ಯರಿಗಸದಳ ಸಂ| ಹರಿಸುವಡವನನು ಧುರದಲ್ಲಿ ‖

ಬ್ರಹ್ಮ : (ಏಕ,ಕೋರೆ) ಆದರೆ ತೋರುವೆ ಹಾದಿಯನೊಂದನು|ಮಾಧವನಲ್ಲಿಗೆ ಪೋಗುವ‖ ಆದುದನಾ ಮಧುಸೂದನನಡಿಯಲಿ| ಸಾದರದಿಂ ಬಿನ್ನೈಸುವ‖ ಸಾಧಿಪನವ ಹೇಗಾದರು ಯತ್ನವ | ಸಾಧಿಸುತಲೆ ದೇವರದೇವ‖ ಖೇದ ಬೇಡವೆನುತಾದಿತೇಯರು ಸಹ| ಐದಿದನಾ ವಾಣೀಧವ ‖

(ಎಲ್ಲರೂ ತೆರಳಿದ ಬಳಿಕ ವಿಷ್ಣುವಿನ ಪ್ರವೇಶ)

ವಿಷ್ಣು : (ತ್ರಿವುಡೆ–1) ಕ್ಷೀರವಾರಿಧಿಯಲಿ ರಮಾವರ | ಘೋರ ಮಹಿಷಾಸುರನ ಹದನ ವಿ ‖ ಚಾರಿಸುತ ತಾನರಿತು ಮುಂದೇನ್ | ದಾರಿಯೆನುತ ‖

ವಿಷ್ಣು : (ತ್ರಿವುಡೆ–1) ವಿಧಿಯ ವರದಿಂ ಗೆಲುವಡಸದಳ | ಮದಮುಖನ ನಾನಿಂದು ಯತ್ನವ ‖ ವಿಧುಧರನ ಬೆಸಗೊಂಬೆನೆನುತಲಿ | ಪದುಮನಾಭ ‖

(ವಿಷ್ಣುವು ಈಶ್ವರನಲ್ಲಿಗೆ ತೆರಳುವನು , ಈಶ್ವರನ ಪ್ರವೇಶ)

ಈಶ್ವರ : (ಅಷ್ಟ–1) ರಜತಾದ್ರಿಯೊಳಗಿತ್ತ ಭುಜಗಭೂಷಣನಂದು | ನಿಜಮನದಲಿ ತಿಳಿದ ‖ ಅಜನಿತ್ತ ವರದಿಂದ ಕುಜನ ಮಹಿಷನು ಸುರ | ವ್ರಜವ ರಣದಿ ಗೆಲಿದ ‖

ಈಶ್ವರ : (ಅಷ್ಟ–1) ದುರುಳನ ತರಿದೆಮ್ಮ ಸುರರನ್ನು ಪೊರೆಯುವ | ಪರಿಯೆಂತು ತಿಳಿಯೆನಿಂದು ‖ ಹರಿಯನ್ನು ಬೆಸಗೊಂಬೆ ತೆರಳುವೆನೆನುತಲಿ | ಪೊರಟನಾಕ್ಷಣದೊಳಂದು ‖

(ಈಶ್ವರನು ವಿಷ್ಣುವನ್ನು ಭೇಟಿಯಾಗಲು ತೆರಳುವನು , ದಾರಿಯಲ್ಲಿ ಪರಸ್ಪರ ಇದಿರಾಗುವರು)

(ಅಷ್ಟ–1) ಬರೆ ತುಹಿನಾದ್ರಿಯ ಬಳಿಯೊಳಗಿದಿರಾಗಿ | ಮುರಹರ ನಡೆತರಲು ‖ ಚರಣಕೆ ವಂದಿಸೆ ಹರಿಹರರೊಂದಾಗಿ | ದುರುಳನ ಹದನದೊಳು ‖

(ಮಹಿಷನನ್ನು ವಧಿಸುವ ಕುರಿತು ಚರ್ಚಿಸಲು ಕುಳಿತುಕೊಳ್ಳುವರು , ಅಲ್ಲಿಗೆ ದೇವತೆಗಳೊಂದಿಗೆ ಬ್ರಹ್ಮ ಬರುವನು)

(ವಾರ್ಧಿಕ) ಕುಳಿತವರು ಚಂದ್ರಕಾಂತಾಶಿಲೆಯೊಳೊಂದಾಗಿ | ಖಳನ ವಧಿಸುವ ಯತ್ನ ಯೋಚಿಸುತಲಿರಲಿತ್ತ ‖ ನಳಿನಭವ ಸುರರನೊಡಗೊಂಡು ನಡೆತಂದು ವೈಕುಂಠನಂ ಕಾಣದಿರಲು ‖ ಬಳಿಕ ಕೈಲಾಸಕೈತರಲಾಗ ಪುರಹರನು | ನಿಳಯದೊಳಗಿಲ್ಲದಿರೆ ಕಳವಳಿಸೆ ಬಳಿಕವರು ‖ ತಿಳುಹಿತಶರೀರ ನುಡಿ ಹರಿಹರರು ತುಹಿನಾದ್ರಿಯೊಳಗಿರ್ಪ ಹದನವನ್ನು ‖

ಬ್ರಹ್ಮ ಮತ್ತು ದೇವತೆಗಳು : (ತ್ರಿವುಡೆ–1) ಹರಿಹರರ ಪದಕೆರಗಿ ಸಕಲರು | ದುರುಳ ಮಹಿಷಾಸುರನುಪಟಳದಿ ‖ ತರಹರಿಸುತಿಹೆವೆಮ್ಮ ನೀವೇ | ಪೊರೆವುದೆನಲು ‖

ವಿಷ್ಣು : (ತ್ರಿವುಡೆ–2) ಕೇಳಿದಾಕ್ಷಣದೊಳಗೆ ಲಕ್ಷ್ಮೀ | ಲೋಲ ತನ್ನಯ ಮನದೊಳಗೆ ಖತಿ ‖ ತಾಳಲಾತನ ದಿವ್ಯತೇಜವು | ಮೇಲಕಡರೆ ‖

ಈಶ್ವರ : (ತ್ರಿವುಡೆ–2) ಘುಡುಘುಡಿಸಿದನು ಪುರವಿನಾಶನ | ಧಡಿಗ ಮಹಿಷಾಸುರನ ಉಪಟಳ ‖ ತಡೆಯದಾಯಿತೆ ಎನಲು ತೇಜವು | ಅಡರೆ ನಭವ ‖

ಬ್ರಹ್ಮ : (ತ್ರಿವುಡೆ–2) ನಳಿನ ಸಂಭವನಂದು ಖಾತಿಯ | ತಳೆಯಲಾತನ ದಿವ್ಯ ತೇಜವು ‖ ನಲವಿನಿಂದಲೆ ನಭವ ಸೇರಿತು | ತಿಳುಹಲೇನು ‖

ದೇವೇಂದ್ರ : (ತ್ರಿವುಡೆ–2) ಸುರಪಮುಖ್ಯಾಮರಕದಂಬವು | ಧರಿಸೆ ಖತಿಯನು ದಿವ್ಯತೇಜವು ‖ ಪೊರಟುದೆಲ್ಲರ ದೇಹದಿಂದಲಿ | ಒರೆವುದೇನು ‖

(ವಾರ್ಧಿಕ) ಮೂರು ಮೂರ್ತಿಗಳ ಮುಖದಿಂದ ಪೊರಟಿಹ ತೇಜ | ಚಾರು ದಿಕ್ಪಾಲಕರ ತೇಜ ಒಂದಾಗುತಲಿ ‖ ನಾರಿಯಾಕೃತಿ ತಳೆದು ಧರೆಗಿಳಿಯೆ ಸುರರು ಜಯ ಜಯವೆಂದು ನುತಿಗೈದರು ‖

(ದೇವಿ ಪ್ರತ್ಯಕ್ಷಳಾದಾಗ ಆರತಿ ಎತ್ತುವರು)

(ಅಷ್ಟ–1) ದೇವಿ ಹೇ ಪಾವನಚರಿತೆ | ನೀನೇ| ಕಾವುದು ನಮ್ಮನು ಕರುಣದಿ ಮಾತೆ ‖ ಭಾವ ಶುದ್ಧಿಯೊಳಿಂದು ಪದವ | ತಾಯೇ| ನಾವು ಮರೆಗೊಂಡೆವು ಕರುಣಿಸಭಯವ ‖

ದೇವಿ : (ತ್ರಿವುಡೆ–1) ಏಳಿರೇಳಿರಿ ಹರಿಹರಾದ್ಯರು | ತಾಳಿ ಧೈರ್ಯವ ಸುರಪಮುಖ್ಯರು ‖ ಪೇಳಬಾರದೆ ಬಂದಕಷ್ಟವ | ಕೇಳಿಕೊಂಬೆ ‖

ದೇವಿ : (ತ್ರಿವುಡೆ–1) ಕೊಟ್ಟಿರಲು ನಾನಭಯ ಪೂರ್ವದಿ | ಕಷ್ಟಕಾಲದೊಳೆನ್ನ ನುತಿಸಲು ‖ ಇಷ್ಟದಿಂ ಪೊರೆಯುವೆನುನುತ ಗೋ | ಳ್ಗುಟ್ಟಲ್ಯಾಕೆ ‖

ತ್ರಿಮೂರ್ತಿಗಳು : (ತ್ರಿವುಡೆ–1) ಮಾತೆ ಲಾಲಿಸು ಖಳಮಹಿಷನು ವಿ | ಧಾತನಿತ್ತಿಹ ವರಬಲದಿ ಸುರ ‖ ವ್ರಾತವೆಲ್ಲವ ದೆಸೆಗೆಡೆಸಿ ನಿ | ರ್ಭೀತಿಯಿಂದ ‖

ದೇವಿ : (ಅಷ್ಟ–2) ಅರಿತೆನರಿತೆ ಕಡು ದುರುಳ ಮಹಿಷ ಸರ | ಸಿರುಹಭವನ ವರದಿ ‖ ಸುರರನ್ನು ಸೋಲಿಸಿ ನೆರೆ ಮದದಿಂದಲೆ | ಮೆರೆವನೆ ಖಳ ನಾಕದಿ ‖

ದೇವಿ : (ಅಷ್ಟ–2) ಶಂಖದುರ್ಗಾದ್ಯರನೊಡಗೊಂಡು ಧರ್ಮವ | ಬಿಂಕದಿ ಗೆಲಿದಾತನ ‖ ಶಂಕಿಸದೆಯೆ ತರಿದಿನ್ನು ಪೊರೆವೆನೆನ್ನ | ಕಿಂಕರರನು ಪ್ರೇಮದಿ ‖

(ಭಾಮಿನಿ) ಎನಲು ಜಯ ಜಯವೆಂದು ಸಕಲರು | ಮಣಿಯಲಾಗಿಯೆ ವಿಶ್ವಕರ್ಮನು ‖ ಘನತರದಿ ಶೋಭಿಸುವ ಭೂಷಣ ವಸನವರ್ಪಿಸಲು ‖ ವನಜನಾಭನು ಕರದ ಚಕ್ರವ | ತ್ರಿಣಯನಾಗ ತ್ರಿಶೂಲವನು ಸಹ ‖ ಕನಕಗರ್ಭನು ಬ್ರಹ್ಮದಂಡವನಿತ್ತು ಪದಕೆರಗೆ ‖

(ಎಲ್ಲರೂ ಅವರವರ ಆಯುಧಗಳನ್ನು ದೇವಿಗೆ ಕೊಟ್ಟನಂತರ ಸಿಂಹ ಬರುವುದು)

ದೇವಿ : (ತ್ರಿವುಡೆ–2) ಸಿಂಹವಾಹಿನಿಯಾಗಿ ದೇವಿಯು | ಸಂಹರಿಸುವೆನು ಖಳರನೆನುತಲೆ ‖ ರುಂ ಹರಿಯು ನಡನಡುಗುವಂದದಿ | ಘಮ್ಮನೈದೆ ‖

(ಸಿಂಹವನ್ನು ಏರಿ ಹೊರಡುವಳು , ಎಲ್ಲರೂ ತೆರಳಿದ ಮೇಲೆ ಪದ್ಯಕ್ಕೆ ಮಹಿಷಾಸುರ ಬರುವುದು)

ಮಹಿಷಾಸುರ : (ತ್ರಿವುಡೆ–2) ಪರಿಪರಿಯ ಉತ್ಪಾತಗಳು ಗೋ| ಚರಿಸಲಾದಿನ ದುರುಳ ಮಹಿಷನು‖ ಅರರೆ ಏನಚ್ಚರಿಯಿದೆನ್ನುತ | ಪೊರಟ ಭರದಿ ‖

(ದೇವಿ ಮತ್ತು ಮಹಿಷಾಸುರ ಇದಿರಾಗುವರು)

ಮಹಿಷಾಸುರ : (ಮಟ್ಟೆ) ಅಷ್ಟಭುಜದಿ ಮೆರೆವ ನಾರಿ | ತಟ್ಟನೆ ಕೇಸರಿಯನೇರಿ ‖ ದಿಟ್ಟತನದಿ ಧುರಕೆ ಬಂದ | ಗುಟ್ಟಿದೇನೆಲೆ ‖

ದೇವಿ : (ಮಟ್ಟೆ) ಅಟ್ಟಿ ಸುರರ ನಾಕವಾಳ್ವ | ದುಷ್ಟ ಮಹಿಷ ನಿನ್ನ ಶಿರವ ‖ ಕುಟ್ಟಿ ಕೆಡಹ ಬಂದೆ ಸುರರ | ಭೀಷ್ಟ ಸಲಿಸಲು ‖

ಮಹಿಷಾಸುರ : (ಮಟ್ಟೆ) ಸುರರ ಪೊರೆಯ ಬಂದೆಯೇನೆ | ತರವಿದಲ್ಲ ನಿನಗೆ ಕಾಣೆ ‖ ಸರಿ ಯಾರೆನಗೆ ಮೂರು ಜಗದಿ | ಧುರದ ಮಧ್ಯದಿ ‖

ದೇವಿ : (ಮಟ್ಟೆ) ಶರಜಪೀಠ ವರವುಂಟೆಂದು | ಧರೆಯ ಯಾಗಗಳನು ತಿಂದು ‖ ಮೆರೆಯುತಿರ್ಪ ದುರುಳ ನಿ | ನ್ನುರವ ಬಗಿವೆನು ‖

ಮಹಿಷಾಸುರ : (ಮಟ್ಟೆ) ನಾರಿ ಹತ್ಯೆಗಂಜಿ ನಾನು | ಸೈರಿಸಿದರೆ ಒಮ್ಮೆಗಿನ್ನು ‖ ಏರಿತಕಟ ಮದವು ನಿನ್ನ | ಗಾರುಗೆಡಿಪೆನು ‖

ದೇವಿ : (ಮಟ್ಟೆ) ನಾರಿಯಾದರೇನು ನಿನಗೆ | ಮಾರಿಯಾಗಿ ಬಂದೆ ಹೀಗೆ ‖ ತೋರಿಕೊಡುವೆನದನು ಸಮರ | ಧಾರಿಣಿಯಲ್ಲಿ ‖

(ಯುದ್ಧ , ದೇವಿಗೆ ಆಯಾಸವಾದಾಗ ಸಿಂಹ ಮತ್ತು ಮಹಿಷಾಸುರರ ಯುದ್ಧ , ಸಿಂಹ ಸೋತಾಗ ಪುನಹ ದೇವಿ ಯುದ್ಧ ಮಾಡಿ ಮಹಿಷನನ್ನು ವಧಿಸುವಳು , ಆರತಿ ಎತ್ತುವರು)

(ಚೌತಾಳ) ಜಯ ಜಯ ಮಂಗಳ ಮಹಿಷಾಂತಕಿಗೆ | ಜಯ ಜಯ ಮಂಗಳ ಚಂದಿರಮುಖಿಗೆ ‖ ಜಯ ಮಂಗಳ ಮಂಗಲ ದೇವತೆಗೆ | ಜಯವೆಂದರಮರು ಭಕ್ತಿಯೊಳೆರಗುತ ‖ ಮಣಿಮಯ ದಾರತಿಯಾ ಬೆಳಗಿದರು | ಬೆಳಗಿದರು ‖

ದೇವಿ : (ತ್ರಿವುಡೆ-1) ಸುರಪ ಭಯ ನಿನಗಿಲ್ಲ ಮುಂದಕೆ | ಹರುಷದಲಿ ನಾಕವನು ಪಾಲಿಸು ‖ ಮರೆಯದೆನ್ನಯ ಚರಣವನು ನೀ | ನಿರತ ಮನದಿ ‖

ದೇವಿ : (ತ್ರಿವುಡೆ-1) ಅಡಸಿದರೆ ಖಳರುಪಟಳವು ನೀ | ನಡೆತರುತ ತುಹಿನಾದ್ರಿಗೆನ್ನನು ‖ ದೃಢಮನದಿ ಭಜಿಸಿದರೆ ಪೊರೆವೆನು | ಬಿಡದೆ ನಿನ್ನ ‖

(ದೇವಿ ಅಂತರ್ಧಾನಳದ ನಂತರ ಎಲ್ಲರೂ ತೆರಳುವರು , ಚಂಡ-ಮುಂಡರ ಪ್ರವೇಶ)

(ಅಬ್ರ) ಇತ್ತಲಾ ಖಳ ಚಂಡಮುಂಡರು | ಧೂರ್ತ ಶುಂಭಾಸುರನ ನೇಮದಿ ‖ ಪೃಥ್ವಿ ಎಲ್ಲವ ಸಂಚರಿಸಿ ಶೋಧಿಸುವೆವೆಂದೆನುತ ‖

ಚಂಡಾಸುರ : (ಏಕ) ವಿಧಿಯನು ಮೆಚ್ಚಿಸಿ ತಪದಿ ಮನೋವೇ | ಗದೊಳಗೆ ಸಂಚರಿಪ ‖ ಅಧಿಕ ವರವ ನಾವ್ ಮೊದಲೇ ಪಡೆದಿರೆ | ಇದಿರಾರೆಮಗೆನುತ ‖

ಮುಂಡಾಸುರ : (ಏಕ) ಇದಿರಾದಧಟರ ಸದೆಯುವ ಗದೆ ತಾ | ಪದುಮಜನಿತ್ತಿರಲು ‖ ಕದನದಿ ಬಗೆಯೆವು ತ್ರಿಜಗವನೆನುತಲೆ | ಮದಮುಖರುಬ್ಬಿನಲಿ ‖

ಚಂಡಾಸುರ : (ಏಕ) ದಾನವ ಶುಂಭನ ನೇಮದೊಳಾ ಗೀ | ರ್ವಾಣರೊಲವನರಿಯೆ ‖ ಕ್ಷೋಣಿಯನೆಲ್ಲವ ಸಂಚರಿಸುತ್ತಲೆ | ದಾನವರಿರಲಂದು ‖

ಮುಂಡಾಸುರ : (ಏಕ) ಇಳೆಯನು ತೊಳಲುತ ತಳೆದಿಹ ಕ್ಷುಧೆಯನು | ಕಳೆಯಲು ಮಾಂಸವನು ‖ ಮೆಲಬೇಕೆನುತಲೆ ತಿಳಿದಾ ದುರುಳರು | ಘಳಿಲನೆ ನಡೆತಂದು ‖

ಚಂಡಾಸುರ : (ಏಕ) ನಡೆತಂದರು ತುಹಿನಾದ್ರಿಗೆ ಬೇಟೆಯ | ನಡೆಸುತ ಮೃಗಗಳನು ‖ ಮಡುಹುತ ಖಡುಗವ ಝಳಪಿಸಿ ದೈತ್ಯರು | ಬಿಡದತಿ ಶೌರ್ಯದಲಿ ‖

ಮುಂಡಾಸುರ : (ಏಕ) ಹಿಡಿಹಿಡಿ ಕಡಿಕಡಿ ಹೊಡಿಹೊಡಿ ಎನುತಲೆ | ಕೆಡಹುತ ಮೃಗಕುಲವ ‖ ಧಡಿಗರು ಮಾಂಸವ ಮೆಲುತಲೆ ವಹಿಲದಿ | ಅಡಗಿಸಿದರು ಹಸಿವ ‖

(ಭಾಮಿನಿ) ಖಳರು ಮೃಗಮಾಂಸವನು ಮೆಲುತಲೆ | ಎಲರಿಗೊಡ್ಡುತ ತನುವ ಶ್ರಮವನು ‖ ಕಳೆವೆವೆಂದೆನುತಾಗ ಬರಲು ಕದಂಬವನದೆಡೆಗೆ ‖

(ಚಂಡ–ಮುಂಡರು ತೆರಳಿದ ನಂತರ , ಶುಂಭನ ಪ್ರವೇಶ)

(ಅಬ್ರ) ಪೃಥ್ವಿಪಾಲಕ ವೈಶ್ಯರಾಲಿಸಿ | ಮತ್ತೆ ಕಾಲಾಂತರಕೆ ಶೋಣಿತ ‖ ಪತ್ತನವ ಆ ಶುಂಭ ದಾನವ | ನಧಿಕವಿಭವದಲಿ ‖

ಶುಂಭ : (ತ್ರಿವುಡೆ–2) ಧನಕುಮಾರಕ ಶುಂಭದಾನವ | ಅನುಜನಾದ ನಿಶುಂಭ ಸಹಿತಲೆ‖ ಘನಪರಾಕ್ರಮದಿಂದ ಶೋಣಿತ | ಜನಪದದಲಿ ‖

ಶುಂಭ : (ತ್ರಿವುಡೆ–2) ಸರಸಿಜೋದ್ಭವನನ್ನು ಮೆಚ್ಚಿಸಿ | ಧರೆಯ ಯೋನಿಜರಿಂದ ಮತ್ತಾ ‖ ಹರಿಹರಾದಿಗಳಿಂದ ಮರಣವು | ದೊರಕದಂತೆ ‖

ಶುಂಭ : (ತ್ರಿವುಡೆ–2) ಪಡೆದಿರಲು ವರಗಳನು ಭುಜಗರ | ಬಿಡದೆ ಗೆಲಿದವ ನಾಕವನು ವಶ ‖ ಪಡಿಸಬೇಕೆಂದೆನುತ ತಮ್ಮನ | ಒಡನೆ ಕರೆದ ‖

(ಕರೆದಾಗ ನಿಶುಂಭನ ಪ್ರವೇಶ , ತೈತ್ಯೆತ್ಯೆತ್ಯೆ....)

ನಿಶುಂಭ : (ಅಷ್ಟ–2) ಕರೆಸಿರ್ಪುದೇತಕೆನ್ನ | ಅಗ್ರಜಗುಣ | ಶರಧಿ ಪೇಳುವುದು ಮುನ್ನ ‖ ಅರೆಕ್ಷಣ ಮಾತ್ರದಿ ನಿನ್ನಾಜ್ಞೆಯಾದುದ | ನೆರವೇರಿಸುತ ಬಹೆ ನಾ ‖

ಶುಂಭ : (ಅಷ್ಟ–2) ಅನುಜ ನಿಶುಂಭ ಕೇಳು | ಕಿರಿಯವ್ವೆಯ | ತನುಜರು ನಾಕದೊಳು ‖ ಘನಮದದೊಳಗಿರ್ಪ ವರನುಸಂಗ್ರಾಮದಿ | ಹನನಗೊಳಿಪುದೀಗಲು ‖

ನಿಶುಂಭ : (ಅಷ್ಟ–2) ಅನುಮಾನವೇಕಿದಕೆ | ನಿರ್ಜರರನ್ನು | ಹನನಗೈಯುವ ಕಾರ್ಯಕೆ ‖ ವನಜ ಪೀಠನವರ ನಮಗಿರೆ ಲಕ್ಷ್ಯವೆ | ಕ್ಷಣದೊಳ್ಕೈದುವ ನಾಕಕೆ ‖

ಶುಂಭ : (ಅಷ್ಟ–2) ಲೇಸನೆ ನುಡಿದೆ ತಮ್ಮ | ಸಂಗರದಲ್ಲಿ | ವಾಸವಾದಿಗಳ ಹಮ್ಮ ‖ ಘಾಸಿ ಗೊಳಿಸಿ ನಾಕ ಪಡೆವರೆ ತೆರಳಲಿ | ನ್ನೀ ಸೈನ್ಯವಿಂದು ನಮ್ಮ ‖

(ದೇವಲೋಕಕ್ಕೆ ಲಗ್ಗೆ ಇಡುವರು , ನಿಶುಂಭ ಮತ್ತು ದೇವೇಂದ್ರ ಇದಿರಾಗುತ್ತಾರೆ)

ನಿಶುಂಭ : (ಏಕ) ಬಿಡುಗಣ್ಣಾಧಿಪ ಕೇಳು | ಗಜ | ವಡರುತ ಬಂದೆಯ ತಾಳು ‖ ಬಡಿದಟ್ಟುತ ಸುಮನಸರ | ನಾ | ಪಡೆದಪೆ ದಿವದಧಿಕಾರ ‖

ದೇವೇಂದ್ರ : (ಏಕ) ನಿನ್ನಂತಹ ಹುಲು ಖಳರು | ದಿವ | ವನ್ನು ಬಯಸಿ ಬಂದವರು ‖ ಎನ್ನೊಳು ಧುರವನು ಮಾಡಿ | ಶಿರ | ವನ್ನು ಕಳೆದರಿಂತಾಡಿ ‖

ನಿಶುಂಭ : (ಏಕ) ವಿಧಿಯ ವರದ ಬಲವಿರಲು | ಹುಲು | ತ್ರಿದಶರ ಬಗೆಯೆ ಧುರದೊಳು ‖ ವಿಧುಧರನೇ ನಡೆತರಲಿ | ನಾ | ಬೆದರುವನಲ್ಲವಿಂದಿನಲಿ ‖

ದೇವೇಂದ್ರ : (ಏಕ) ಮಾತೆ ದುರ್ಗಾಂಬಿಕೆ ದಯದಿ | ಖಳ | ವ್ರಾತವನರಿವೆನೀದಿನದಿ ‖ ಧೂರ್ತನೆ ತೆರಳಿದರುಳಿವೆ | ನೀ | ವ್ಯರ್ಥದಿ ಕಾದುತಲಳಿವೆ ‖

(ಯುದ್ಧ , ನಿಶುಂಭ ಬಳಲಿದಾಗ , ಶುಂಭನು ದೇವೇಂದ್ರನನ್ನು ಇದಿರಿಸುತ್ತಾನೆ)

ದೇವೇಂದ್ರ : (ಅಷ್ಟ–2) ಯಾರೆಲ ದಾನವನೆ | ನಾಕವನಿದ | ಸೇರುತ್ತ ನೀ ಘಮ್ಮನೆ ‖ ಈ ರಿತಿಯಿಂದಲಿ ಸಮರಕ್ಕೆ ನಡೆತಂದ | ಕಾರಣ ಪೇಳ್ವುದೆನೆ ‖

ಶುಂಭ : (ಅಷ್ಟ–2) ಶೋಣಿತಾಧಿಪ ಶುಂಭನು | ಸಂಗರದಿ ಗೀ | ರ್ವಾಣರ ಬಡಿದು ನಾನು ‖ ಈ ನಾಕವನ್ನಾಳದಿರೆನು ಪೌರುಷವನ್ನು | ಕಾಣಿಸೆನ್ನೊಡನೆ ನೀನು ‖

ದೇವೇಂದ್ರ : (ಅಷ್ಟ–2) ನೂರು ಯಾಗಗಳ ಗೈದು | ನಾಕವು ಎನ್ನ | ಸೇರಿರೆ ಬಯಸಿ ಬಂದು ‖ ಘೋರ ದಾನವರು ಸಂಗರಗೈದುವರು ಯಮ | ನೂರ ಪೊಕ್ಕಿರುವರಂದು ‖

ಶುಂಭ : (ಅಷ್ಟ–2) ವಿಧಿಯ ವರದ ಬಲದಿ | ಬಗೆವನಲ್ಲ | ತ್ರಿದಶರ ಸಂಗರದಿ ‖ ಸದೆದಿನ್ನು ನಾಕ ಸಂಪದವನಾಳದೆ ಬಿಡೆ | ನದ ಕಾಣಿಸುವೆ ಕ್ಷಣದಿ ‖

(ಯುದ್ಧ , ದೇವೇಂದ್ರ ಸೋಲುತ್ತಾನೆ , ಶುಂಭನು ಗದ್ದುಗೆ ಏರಿ ಡಂಗುರ ಹೊಡೆಸುತ್ತಾನೆ)

ಶುಂಭ : (ಏಕ) ಚಾರು ಚತುರ್ದಶ ಜಗಕೆ | ಅಧಿ | ಕಾರಿಯು ತಾನೆಂಬುದಕೆ ‖ ಭೋರನೆ ಡಂಗುರ ಹೊೖಸಿ | ಸುರ | ವಾರವ ತಾ ದೆಸೆಗೆಡಿಸಿ ‖

(ಶುಂಭ ತೆರಳಿದ ಮೇಲೆ , ದೇವೇಂದ್ರ ಮರುಗುತ್ತ ಬರುತ್ತಾನೆ)

ದೇವೇಂದ್ರ : (ರೂಪಕ) ದುರುಳ ಶುಂಭಾಸುರ | ಸುರರನ್ನು ಸೋಲಿಸಿ | ಮೆರೆಯುತ್ತಲಿರಲು ನಾಕದಲಿ ‖ ಮರುಗುತ್ತ ಸುಮನಸ | ನೆರವಿಯನೊಡಗೊಂಡು | ಪುರುಹೂತ ತೊಳಲಿದ ಮನದಿ ‖

ದೇವೇಂದ್ರ : (ರೂಪಕ) ಹರಿತಂದು ಭಕ್ತಿಯೊಳ್ | ವರತುಹಿನಾದ್ರಿಯೊಳ್ | ಸ್ಮರಿಸಲು ಶ್ರೀದೇವಿಯನ್ನು ‖ ಚರಣದರ್ಶನವಿತ್ತು | ಸುರರಿಗಭಯವನ್ನು | ಕರುಣಿಸುತಿಂದೆಂದಳು ‖

(ದೇವಿಯನ್ನು ಸ್ಮರಿಸಿದಾಗ ದೇವಿ ಪ್ರತ್ಯಕ್ಷಳಾಗುತ್ತಾಳೆ)

ದೇವಿ : (ರೂಪಕ) ಏಳಯ್ಯ ಸುರಪಾಲ | ಗೋಳುಗುಟ್ಟುವುದೇಕೆ | ಖೂಳ ಮಹಿಷ ನಿಮ್ಮನು ‖ ಸೋಲಿಸಿ ನಾಕವ | ನಾಳುತ್ತಿರಲು ಕಾಲ | ನಾಲಯಕಟ್ಟಿಹೆನು ‖

ದೇವೇಂದ್ರ : (ರೂಪಕ) ಜನನಿ ಕೇಳ್ ಬಿನ್ನಹ |ದನುಜ ಮಹಿಷಗಿಂತ | ಘನಪರಾಕ್ರಮಿ ಶುಂಭನು‖ ಅನುವರದಲಿ ಸುರ | ರನು ಸೋಲಿಸುತ ನಾಕ | ವನು ಪಾಲಿಸುವ ಖಳನು ‖

ದೇವಿ : (ಭಾಮಿನಿ) ಕರುಣಿಸುತಲಭಯವನು ನುಡಿದಳು | ಕಿರಿದು ಸಮಯದಿ ತರಿದು ದೈತ್ಯರ | ನೆರವಿಯನು ಪೊರೆಯುವೆನು ನಿಮ್ಮನು ಮರೆಯ ಮಾತಲ್ಲ ‖ ಮರೆಸಿ ನಿಜವನು ತುಹಿನಗಿರಿಯೊಳ | ಗಿರುತ ನೋಡುವುದೆನ್ನ ಲೀಲೆಯ | ಹರುಷದೊಳಗೆಂದೆನುತ ತ್ರಿದಶರಿಗರುಹಿ ಶ್ರೀದೇವಿ ‖

(ದೇವೇಂದ್ರ ತೆರಳಿದ ಮೇಲೆ ದೇವಿ ಯೋಚಿಸುತ್ತಾಳೆ)

ದೇವಿ : (ಅಷ್ಟ–1) ಎಂದು ಯೋಚಿಸಿ ಮಹಮ್ಮಾಯೆ | ದೈತ್ಯ | ವೃಂದವ ಮೋಹಿಸಿ ತರಿಯೆ ‖ ಸುಂದರಾಂಗವ ತಳೆ | ದಂದು ಕೌಶಿಕೆಯಾಗಿ | ನಿಂದಳು ಮೆರೆವ ಕ | ದಂಬ ವನದೊಳಂದು ‖

ದೇವಿ : (ಅಷ್ಟ–1) ದಿನಕರ ಕೋಟಿ ತೇಜದಲಿ | ತನ್ನ | ತನು ಕಾಂತಿಯನು ಬೀರುತಲ್ಲಿ ‖ ಮನವ ಮೋಹಿಸುವ ಗಾ | ಯನವ ಪಾಡುತ್ತಲೆ | ದನುಜರ ವಂಚಿಪೆ | ನೆನುತಲೆ ವಹಿಲದಿ ‖

ದೇವಿ : (ಭಾಮಿನಿ) ಯೋಗಿಜನ ವಿಭ್ರಮಿಪ ವನದಲಿ | ಹೇಮದುಯ್ಯಾಲೆಯನು ತೂಗುತ | ಹದಿನಾರು ಸಾವಿರ ರಾಗದಲಿ ಸ್ವರವೆತ್ತಿ ಹಾಡಿದಳು ‖ ನಾಗವೇಣಿಯು ಜಗತ್ರಯವ ಮೋಹಿಸಿದಳು ಏನನೆಂಬೆ ‖

ದೇವಿ : (ಅಷ್ಟ–1) ಉಯ್ಯಾಲೆಯಾಡಿದಳು | ದೇವಿ | ಉಯ್ಯಾಲೆಯಾಡಿದಳು ‖ ವೈಯ್ಯಾರಿ ವೈಷ್ಣವಿಯು | ಮೈಯ ಓಲಾಡಿಸುತ್ತ | ಶೃಂಗಾರದಿಂದಲಿ | ಸ್ವರವೆತ್ತಿ ಹಾಡುತ್ತ ‖

ದೇವಿ : (ಅಷ್ಟ–1) ಕನಕದುಯ್ಯಾಲೆ ಮೆರೆಯಲು | ಆ | ವನದೊಳಗಂದು ಮೋದದೊಳು ‖ ಸನುಮತದಿಂದ ಉ | ಯ್ಯಾಲೆಯನಾ ಜಗ | ಜನನಿಯಾಡುತ್ತಲೆ | ಘನ ಸೊಬಗಿನೊಳಲ್ಲಿ ‖

(ಉಯ್ಯಾಲೆಯಲ್ಲಿ ದೇವಿ ಹಾಡುತ್ತ ಕುಳಿತಿರುವಲ್ಲಿಗೆ ಪದ್ಯಕ್ಕೆ ಚಂಡ–ಮುಂಡರು ಬರುವರು)

ಚಂಡ–ಮುಂಡರು : (ತ್ರಿವುಡೆ–1) ಕೇಳಿಸಿತು ಸುಸ್ವರವು ಖೇಚರ | ಬಾಲೆಯರ ಸಂಗೀತ ದಂದದೊಳ್ ‖ ಆಲಿಸುತ ಭ್ರಮೆಗೊಂಡರಾಗಲೆ | ಖೂಳಖಳರು ‖

ಚಂಡ : (ರೂಪಕ) ವೀಣೆಯ ಪಿಡಿದಿರ್ಪ | ವಾಣಿ ಈ ಪರಿಯಲ್ಲಿ | ಕಾನನದೆಡೆಗಾಗಿ ಬಂದು ‖ ಸಾನುರಾಗದೊಳಿಂದು | ಗಾನ ಪಾಡುವಳೊ ಇ | ದೇನೆಂದು ತಿಳಿಯದಾಗಿಹುದು ‖

ಮುಂಡ : (ರೂಪಕ) ತುಂಬುರು ನಾರದ | ರೆಂಬವರಿನಿತು ಕ | ದಂಬ ವನಕೆ ನಡೆತಂದು ‖ ಸಂಭ್ರಮದೊಳಗಿಂತು | ಗಾನ ಪಾಡುವರೊ ಏ | ನೆಂಬುದ ತಿಳಿಯಬೇಕೆಂದು ‖

(ಭಾಮಿನಿ) ಸ್ವರವಿಡಿದು ನಡೆತರಲು ತನುವಿನ | ಪರಿಮಳವು ನಾಸಿಕಕೆ ಸೋಂಕಲು ‖ ಅರರೆ ಕೌತುಕವೆಂದು ಪರಿಮಳವಿಡಿದು ಮುಂಬರಿಯೆ ‖ ತರಣಿಕೋಟಿ ಪ್ರಕಾಶವದು ಗೋ | ಚರಿಸ ಲಚ್ಚರಿಯಿಂದ ಶೋಧಿಸಿ ‖ ಬರುತ ಕಂಡರು ಸ್ವರ್ಣದುಯ್ಯಾಲೆಯಲಿ ದೇವಿಯನು ‖

ಚಂಡ–ಮುಂಡ : (ಆದಿ,ಏಕ,ಕೋರೆ) ಅರರೆ ಇನ್ನಿವಳೆಂತ ವಿಟಗಾರೆ | ನೋಡೆ | ಸ್ಮರನ ಕೂರ್ಗಣೆ ಯಂತಿಹಳು ನೀರೆ ‖ ಶರದಿಂದುವದನೆ ಹರಿಣನೇತ್ರೆ | ಚೆಲ್ವ | ತರುಣಿಮಣಿಯು ವಿಮಲಗಾತ್ರೆ ‖ ಮನೆಮಾರುಗಳನೆ ಬಿಟ್ಟಿಹಳೀಕೆ | ಬಂದು | ವನದೊಳು ಯ್ಯಾಲೆಯಾಡುವಳೇಕೆ ‖

ಚಂಡ : (ಏಕ,ಕೋರೆ) ವಾರಿಜಗಂಧಿನಿ ವಯ್ಯಾರೆ | ಯಾರು ನೀನು ಮುದದೊಳುಸುರೆ | ಓರ್ವಳೇ ಈ ವನದೊಳಿಪ್ಪ | ಕಾರಣವೇನೆ ‖ ಊರು ಮನೆಗಳೆಲ್ಲಿ ನಿನಗೆ | ಯಾರು ಪೆತ್ತವರೆಂಬ ಹಾಗೆ | ತೋರಿ ದಯವ ಪೇಳು ನೀ ವಿ | ಸ್ತಾರದಿಂದಲಿ ‖

ದೇವಿ : (ಏಕ,ಕೋರೆ) ಊರು ಮನೆಗಳಿಲ್ಲ ಪೆತ್ತ | ರ್ಯಾರೊ ತಿಳಿಯೆ ಇದುವೆ ಸತ್ಯ | ಮೂರು ಲೋಕವೆಲ್ಲ ಎನ್ನ | ಸೇರಿಕೊಂಡಿರೆ ‖ ಘೋರ ವಿಪಿನವಾದರೇನು | ಊರುಮನೆಗಳೆನುತಿನ್ನೇನು | ತೋರದೆನಗೆ ಭೇದ ಬಂದು | ಈ ರೀತಿಯೊಳಿರ್ಪೆ ‖

ಚಂಡ : (ಏಕ,ಕೋರೆ) ಪುಂಡರೀಕಾಂಬಕಿಯೆ ನಿನ್ನ | ಗಂಡನ್ಯಾರು ಪೇಳೆ ಮುನ್ನ | ಕಂಡು ಹರುಷವಾಯ್ತು ಮದುವೆ | ಆಗದಿದ್ದರೆ ‖ ಚಂಡಮುಂಡರಿದಕೊ ನಾವು | ಗಂಡುಗಲಿಗಳೊಳಗೆ ಮನಕೆ | ಕಂಡವನನು ವರಿಸಿ ಸುಖವ | ಉಂಡು ಬಾಳೆಲೆ ‖

ದೇವಿ : (ಏಕ,ಕೋರೆ) ಚಂಡಮುಂಡರುಗಳೆ ನೀವು | ಗಂಡುಗಲಿಗಳಹುದು ದಿಟವು | ಕಂಡು ಹರುಷವಾಯ್ತು ವರಿಸಿ | ಕೊಂಬ ಹದನಕೆ ‖ ಹಿಂದೆ ಗೈದೆ ಶಪಥ ಶಸ್ತ್ರ | ಗೊಂಡು ಎನ್ನ ಗೆಲುವ ಭಟನ | ನೆಂದು ಯುದ್ಧದಲ್ಲಿ ಜೈಸ | ಲಿಂದು ವರಿಪೆನು ‖

ಚಂಡ–ಮುಂಡರು : (ಅಷ್ಟ–2) ನಾ ಮುಂದೆ ತಾ ಮುಂದೆ ಎನ್ನುತ್ತ | ಖಳ | ಕಾಮುಕರ್ ಹೊಯ್ದಾಡಿಕೊಳ್ಳುತ್ತ ‖ ಭೂಮಿಯೊಳಗೆ ಬೀಳುತೇಳುತ್ತ | ಮತ್ತೆ | ತಮ್ಮೊಳು ತಾವಾಡಿಕೊಳ್ಳುತ್ತ ‖

(ನಾನು ನಾನು ಎಂದು ಹೊಡೆದಾಡಿಕೊಂಡ ನಂತರ ಎಚ್ಚೆತ್ತುಕೊಂಡು)

ಚಂಡ : (ಏಕ,ಕೋರೆ) ಕಂಬುಕಂಠಿನಿ ಕೇಳ್ ನಿಜವ | ಹಂಬಲಿಸುವೆ ಯಾಕೆ ರಣವ | ಶುಂಭನು ನಮ್ಮಣ್ಣ ಗೆಲಿದ | ಮೂರು ಲೋಕವ ‖ಜಂಭವೈರಿ ಪುರವಾಳುವನು| ಸಂಭ್ರಮದಲಿ ವರಿಸುತವನ| ಕುಂಭಿನಿಯಲಿ ಸುಖದಿ ಬಾಳು | ಅಂಬುಜಾಮುಖಿ ‖

ದೇವಿ : (ಏಕ,ಕೋರೆ) ಶುಂಭನಾದರೇನು ಎನಗೆ | ಶಂಭುವೇ ತಾನಾಗಲಿ ಮಿಗೆ | ಅಂಬನೆಸೆದು ಗೆಲದೆ ಮನಸು ಒ | ಡಂಬಡದಯ್ಯ ‖ ಜಂಭವೈರಿ ಮುಖ್ಯ ಸುರ ಕ | ದಂಬವನ್ನು ಗೆಲ್ದ ಶೌರ್ಯ | ಅಂಬುಜಾಕ್ಷಿಯಲ್ಲಿ ಮೆರೆಸಿ | ವರಿಸಿಕೊಳ್ಳಲಿ ‖

(ಭಾಮಿನಿ) ದೇವಿಯಾಡಿದ ನುಡಿಯನಾಲಿಸಿ | ಭಾವಕಿಯೊಳೆಮಗೇಕೆ ವಾದವು ‖ ಈ ವಿವರವ ನೊರೆಯಲಣ್ಣನ ಮನಕೆ ಬಂದಂತೆ ‖ ತಾ ವಿಚಾರಿಸಿಕೊಳ್ಳಲೆನುತಲೆ | ತೀವಿದುತ್ಸಹದಿಂದ ಬಂದಾ‖ ದೇವವೈರಿಯ ಪಾದಕೆರಗುತಲೆಂದರೀಪರಿಯ ‖

(ಶುಂಭನಿದ್ದಲ್ಲಿಗೆ ಬರುತ್ತಾರೆ)

ಚಂಡ : (ಅಷ್ಟ–1) ಧರಣಿಯನೆಲ್ಲ ಸಂಚರಿಸಿ ಶೋಧಿಸಿದೆವು | ಅಣ್ಣದೇವ | ನಿನ್ನ | ನಿರತ ಕೊಂಡಾಡುತ್ತ ಇರುವರು ತ್ರಿಜಗದೊ | ಳಣ್ಣದೇವ ‖ ಅರಿತಿದನೆಲ್ಲವ ಮೃಗ ಬೇಟೆಗೆನುತಲೆ | ಅಣ್ಣದೇವ | ನಾವು | ತೆರಳಿ ತುಹಿನಗಿರಿಯಲಿ ಬೇಟೆಯಾಡುತ್ತ | ಅಣ್ಣದೇವ ‖

ಮುಂಡ : (ಅಷ್ಟ–1) ಎಲರಿಗೊಡ್ಡುತ ತನು ಕಳೆಯಲು ಶ್ರಮವನ್ನು | ಅಣ್ಣದೇವ | ನಾವು | ತಳುವದೆ ಹೋಗಲು ಕದಂಬ ವನಕಿಂದು | ಅಣ್ಣದೇವ ‖ ಚೆಲುವೆಯೋರ್ವಳು ಸ್ವರ್ಣದುಯ್ಯಾಲೆ ಆಡುತ್ತ | ಅಣ್ಣದೇವ | ಕುಳಿ | ತಿರಲಾಗಿ ಕಾಣುತ್ತಲಾಗ ಮಾನಿನಿಯನ್ನು | ಅಣ್ಣದೇವ ‖

ಶುಂಭ : (ಆದಿ,ಏಕ,ಕೋರೆ) ಅಂಥಾ ಚೆಲುವೆಯೇನೆ | ಆ ಯುವತಿಯು | ಅಂಥಾ ಚೆಲುವೆಯೇನೆ| ಅಂಥಾ ಚೆಲುವೆಯೇನೆ ವನದೊಳಗಿಹ ಕಾಂತೆ | ಕಾಂತೆಯರೊಳು ರಂಭೆ ರತಿಗಿಂತ ಮಿಗಿಲೇನೆ ‖

ಶುಂಭ : (ಏಕ,ಕೋರೆ) ತರಬೇಕು ತರುಣಿಯಳ | ಕಾಮನ ಮುಂಗೈ | ಅರಗಿಣಿಯಂತಿಹಳ | ಸಿಂಗನಕಟಿ ಸುಕುರಂಗಲೋಚನೆ | ಚಂದ್ರಬಿಂಬಾನನೆ ವರ ಕರಿಗಮನೆಯ ‖

ಚಂಡ : (ಅಷ್ಟ–1) ನಿನಗೆಣೆಯವಳೆಂದು ನುಡಿಸಿದರಾಕೆಯ | ಅಣ್ಣದೇವ | ತನ್ನ | ರಣದಲ್ಲಿ ಗೆಲುವನ ವರಿಸುವೆ ಎನುತಲಿ | ಅಣ್ಣದೇವ ‖ ಪಣವನ್ನು ಗೈದಿರ್ಪಳಂತೆ ಪೂರ್ವದೊಳಿನ್ನು | ಅಣ್ಣದೇವ | ಚೆಲ್ವ | ವನಿತೆಗೆ ಸರಿಗಾಣೆ ಇನ್ನು ಮೂಲ್ಲೋಕದಿ | ಅಣ್ಣದೇವ ‖

ಮುಂಡ : (ಅಷ್ಟ–1) ಏನಾದರಾಗಲಿ ಬಿಡಬಾರದಾಕೆಯ | ಅಣ್ಣದೇವ | ಇಂದು | ನೀನೆ ವರಿಸಿಕೊಂಡರೆಣೆಯಿಲ್ಲ ತ್ರಿಜಗದಿ | ಅಣ್ಣದೇವ ‖ ಮಾನಿನಿ ಮಣಿಯ ಉಪಾಯದಿ ಕರೆಸಿಲ್ಲಿ | ಅಣ್ಣದೇವ | ಕಾರ್ಯ | ಹಾನಿಯಾದರೆ ಕರೆಸೆಮ್ಮನು ಬೇಗದಿ | ಅಣ್ಣದೇವ ‖

(ಚಂಡ ಮುಂಡರನ್ನು ಒಳಕ್ಕೆ ಕಳುಹಿಸಿ ಶುಂಭನು ಯೋಚಿಸುತ್ತಾನೆ)

ಶುಂಭ : (ಭಾಮಿನಿ) ಎನುವ ನುಡಿ ಲಾಲಿಸುತ ಶುಂಭನು | ಮನಸಿಜನ ಶರಹತಿಗೆ ಸಿಲುಕುತ ‖ ವನಜನೇತ್ರೆಯ ವರಿಸದಿರೆ ಎಂದೆನುತ ನಿಶ್ಚೈಸಿ ‖ ರಣವ ಬಯಸುವಳೇತಕಮಮಾ | ವನಿತೆಗಿನ್ನನುಚಿತವು ಸಾಮದಿ ‖ ಮನವ ಒಲಿಸುವೆನೆಂದು ಸುಗ್ರಿವನನು ಕರೆದೆಂದ ‖

(ಸಚಿವ ಸುಗ್ರೀವನನ್ನು ಕರೆಯುತ್ತಾನೆ , ಸುಗ್ರೀವ ಬರುತ್ತಾನೆ)

ಶುಂಭ : (ಜಂಪೆ–2) ಕೇಳಯ್ಯ ಸುಗ್ರೀವ ಪೇಳುವೆನು ಎಲೆ ಸಚಿವ | ಜಾಲವಲ್ಲೊಂದು ವಾರ್ತೆಯನು ‖ ಕೇಳಿದೆನು ಮೆರೆವ ಕದಂಬವನದೊಳಗೆ ಉ | ಯ್ಯಾಲೆಯಲಿ ಸತಿ ಮೆರೆವಳಂತೆ ‖

ಶುಂಭ : (ಜಂಪೆ–2) ಧರಣಿ ಮೂರರೊಳಿಲ್ಲ ತರಳಾಕ್ಷಿಗೆಣೆಯಾದ | ತರುಣಿಯರು ಎಂದು ಎನ್ನೊಡನೆ ‖ ಅರುಹಿದರು ಮಮ ಸಹಜರಿರದೆ ನೀ ತೆರಳುತ್ತ | ಕರೆತಹುದು ಹಿತವಚನದಿಂದ ‖

(ಸುಗ್ರೀವನು ದೇವಿಯಲ್ಲಿಗೆ ಬರುತ್ತಾನೆ)

ಸುಗ್ರೀವ : (ಭಾಮಿನಿ) ಶುಂಭನಾಜ್ಞೆಯೊಳೈದಿ ಮೆರೆವ ಕ | ದಂಬ ವನವನೆ ಪೊಗುತ ತ್ರೈಜಗ ‖ ದಂಬಿಕೆಯ ಲಾವಣ್ಯವನು ನೆರೆ ಕಂಡು ಸುಗ್ರೀವ ‖ ಹಂಬಲಿಸಿದನು ಶಿವಶಿವಾ ಸ್ಮರ | ನಂಬಿಗುರೆ ಸಿಲುಕುತಲಿ ನಮ್ಮಯ ‖ ಶುಂಭ ಕೆಟ್ಟನು ತಿಳಿದು ನೋಡಲಿಕೀಕೆ ಮಾನಿನಿಯೆ ‖

ಸುಗ್ರೀವ : (ಭಾಮಿನಿ) ಸಿಕ್ಕುವಳೆ ದಾನವಗೆ ಸಿಕ್ಕಲು | ದಕ್ಕುವಳೆ ತ್ರಿಜಗವನು ತನ್ನಯ ‖ ಕುಕ್ಷಿಯೊಳಗಿರಿಸುತ್ತ ನಿತ್ಯದಿ ಸಲಹುತಿಹ ಮಾತೆ ‖ ಮಕ್ಕಳಾಟಿಕೆಯಾಯ್ತು ನಮ್ಮದು | ರಕ್ಕಸಾನ್ವಯ ಅಳಿಯಿತಿಂದಿಗೆ ‖ ಮಿಕ್ಕ ಮಾತೇನೊಡೆಯನಾಜ್ಞೆಯು ನಮಗೆ ಮಾನ್ಯವಲ ‖

ಸುಗ್ರೀವ : (ರೂಪಕ) ಜನನಿ ಕೇಳ್ ಬಿನ್ನಹವನು ಕರುಣದೊಳಿಂದು | ವನದಲ್ಲಿ ಕುಳಿತಿಹುದೇಕೆ ‖ ಸನುಮತವಲ್ಲಿದು ನಿನಗೆ ಪೇಳುವೆನೊಂದ | ದನುಜೇಶ ಶುಂಭನ ಬಯಕೆ ‖

ಸುಗ್ರೀವ : (ರೂಪಕ) ಅರಿತು ನಿನ್ನಿರವನ್ನು ವರಿಸಬೇಕೆನುತ | ನಿರ್ಧರಿಸುತ್ತ ಎನ್ನ ಅಟ್ಟಿದನು ‖ ಸುರನರೋರಗರ ಸಂಗರದಲ್ಲಿ ಗೆಲಿದನು | ಸರಿಗಾಣೆನಾತನಿಗಿನ್ನು ‖

ಸುಗ್ರೀವ : (ರೂಪಕ) ಸ್ಮರನಿಭರೂಪನು ಸರಿ ನಿನಗಾತನು | ವರಿಸುತ್ತಲವನ ಸಂತಸದಿ ‖ ನೆರೆ ಸುಖದಿಂದಲೆ ನಿರತ ಬಾಳೆನುತವ | ನೊರೆದನು ಮಣಿಯುತ ಪದದಿ ‖

ದೇವಿ : (ಅಬ್ರ) ಎನುವ ನುಡಿ ಲಾಲಿಸುತ ದೇವಿಯು | ದನುಜ ಬೀಸಿದ ಬಲೆಗೆ ಸಿಲುಕಿದ ‖ ಹನನಗೊಳಿಸುವ ಕಾರ್ಯವದು ನೆರೆ ಸುಲಭವಾಯ್ತೆನುತ ‖ ಮನದಿ ನಿಶ್ಚೈಸುತ್ತ ಕಿರುನಗೆ | ಯನು ತಳೆಯೆ ದಾನವನು ಉರುಳೆ ‖ ಜನಪದದಿ ಯೋಚಿಸಿದಳಾಕ್ಷಣ ದೇವಿ ಮನದೊಳಗೆ ‖

(ದೇವಿ ನಗಾಡಿದಾಗ ಸುಗ್ರೀವನು ಉರುಳಿ ಬೀಳುವನು)

ದೇವಿ : (ಕಂದ) ಒಡೆಯನ ಗುಣವಂ ಪೊಗಳಿದ | ಬಿಡದಿದು ತಪ್ಪಲ್ಲ ದನುಜನೀಪರಿಯಿಂದಂ ‖ ಮಡಿದರೆ ದೈತ್ಯಗೆ ಹದನವ | ನುಡಿಯುವವರ್ಯಾರೆಂದು ಬೀರಿ ಕರುಣಾ ರಸವಂ ‖

{ ದೇವಿ : (ಭಾಮಿನಿ) ಈತನಳಿದರೆ ತಾನು ಪೇಳಿದ | ಮಾತ ಶುಂಭಾಸುರಗೆ ಅರುಹುವ ‖ ದೂತನಿಲ್ಲೆಂದೆಬ್ಬಿಸಲು | ಸುವಾತವಿತ್ತು ‖

(ಸುಗ್ರೀವನನ್ನು ಎಬ್ಬಿಸುವಳು)

ಸುಗ್ರೀವ : (ಭಾಮಿನಿ) ನಿದ್ದೆ ಬಂದವರಂತೆ ಮೈಮುರಿ | ದೆದ್ದು ನೋಡಿದ ಜಗವ ನುಂಗುವ ‖ ದುರ್ದರದ ಬಲು ಮೃತ್ಯುವೋ ಎಂ | ದೂರ್ಧ್ವ ಮುಖದಿ ‖

ಸುಗ್ರೀವ : (ಏಕ,ಕೋರೆ) ಶರಣನ ಮೇಲಿಂತು ಮುನಿಸೇಕೆ ಮಾತೆ | ಕರೆತರಲೆನ್ನುತ್ತ ಶುಂಭನ ಬಯಕೆ ‖ ದಾನವ ವಂಶಕ್ಕೆ ದಾತಾರನವನು | ಭಾನುಮಂಡಲದಂತೆ ಶೋಭಿಪನವನು ‖

ದೇವಿ : (ಅಷ್ಟ–2) ಶುಂಭನಾಗಲಿ | ತಮ್ಮ ನಿ | ಶುಂಭನಾಗಲಿ ‖ ಅಂಬು ವೊನೆಯಲಿ | ಅಂಬುಜಾಕ್ಷಿಯ | ಗೆದ್ದು ವರಿಸಲಿ ‖}

ದೇವಿ : (ಏಕ,ಕೋರೆ) ಬೆದರದಿರಯ್ಯ ಪೇಳ್ವುದನೆಲ್ಲ ಲಾಲಿಸು | ಅಧಿಕ ಶುಂಭಾಖ್ಯನೆಂದು ‖ ಹದನವನೆಲ್ಲವ ಮೊದಲೆ ತಿಳಿದಿರೆ ಈ | ವಿಧ ಪೇಳಲ್ಯಾಕೆ ಬಂದು ‖

ದೇವಿ : (ಏಕ,ಕೋರೆ) ವರಿಸುವ ಮನವಿರೆ ಧುರಕೆ ಸನ್ನಹವಾಗಿ | ಬರಲಿ ಎನ್ನಯ ಶೌರ್ಯವ ‖ ಮೆರೆಸಲಿ ಜೈಸಲಿ ವರಿಸುವೆನಾತನ | ಹರುಷದಿ ಕೇಳ್ ನಿಜವ ‖

(ಸುಗ್ರೀವನು ಶುಂಭನಲ್ಲಿಗೆ ಬಂದು ಹೇಳುತ್ತಾನೆ , ಶುಂಭ ಸಿಟ್ಟಾಗುತ್ತಾನೆ)

ಶುಂಭ : (ತ್ರಿವುಡೆ–2) ಧಿಕ್ಕರಿಸಿ ನೀತಿಗಳ ತಾ ಸಮ | ರಕ್ಕೆ ಕರೆದಳೆ ಎನ್ನ ಹುಲು ಕಮ ‖ ಲಾಕ್ಷಿಯನು ವರಿಸದಿರೆ ಇನ್ನೇ | ತಕ್ಕೆ ಬಾಳ್ವೆ ‖

ಶುಂಭ : (ತ್ರಿವುಡೆ–2) ಎಂದೆನುತ ಧೂಮ್ರಾಕ್ಷ ದೈತ್ಯನ | ನಂದು ಕೋಪದಿ ಕರೆಯಲಾ ಖಳ ‖ ಬಂದವನು ಚರಣಕ್ಕೆ ಪೊಡಮಡು | ತೆಂದನಾಗ ‖

(ಧೂಮ್ರಾಕ್ಷನನ್ನು ಕರೆಯುತ್ತಾನೆ , ಆತ ಬರುತ್ತಾನೆ , ತೈತೈತೈತೈ.......)

ಧೂಮ್ರಾಕ್ಷ : (ಅಷ್ಟ–2) ಕರೆಸಿದ ಹದನವೇನು | ದೈತ್ಯೇಶ ನೀ | ನರುಹಿದ ಕಾರ್ಯವನು ‖ ಅರೆ ಕ್ಷಣ ಮಾತ್ರದಿ ವಿರಚಿಸಿ ಬರುವಂತೆ | ಧುರ ಧೀರ ನಾನಿಹೆನು ‖

ಶುಂಭ : (ಅಷ್ಟ–2) ಕೇಳು ಧೂಮ್ರಾಕ್ಷ ನೀನು | ಕದಂಬದು | ಯ್ಯಾಲೆಯೊಳಿರ್ಪಳನು ‖ ಲೀಲೆಯಿಂ ವರಿಸಲು ಪೇಳಿ ಕಳುಹಿದರೆ | ಕಾಳಗ ಬಯಸುತಿನ್ನು ‖

ಧೂಮ್ರಾಕ್ಷ : (ಅಷ್ಟ–2) ಧುರವನ್ನೆ ಬಯಸಿದಳೆ | ತ್ರೈಜಗವ ಗೆ | ದ್ದಿರುವ ನಿನ್ನೊಳಗಬಲೆ ‖ ಕರುಣಿಸಲಾಜ್ಞೆಯ ತರುಣಿಯ ಪಿಡಿದೆಳೆ | ತರುವೆ ನಿನ್ನೆಡೆಗೀಗಲೆ ‖

(ಧೂಮ್ರಾಕ್ಷನನ್ನು ಕಳುಹಿಸುತ್ತಾನೆ , ಧೂಮ್ರಾಕ್ಷ ಮತ್ತು ದೇವಿ ಇದಿರಾಗುತ್ತಾರೆ)

ಧೂಮ್ರಾಕ್ಷ : (ಏಕ) ತರುಣೀಮಣಿ ನೀನೇನೆ | ಧಿ | ಕರಿಸುತ ಶುಂಭನ ಜಾಣೆ ‖ ಧುರವನು ಬಯಸಿರ್ಪವಳು | ಬಂ | ದರೆ ಒಳ್ಳಿತು ಹರುಷದೊಳು ‖

ಧೂಮ್ರಾಕ್ಷ : (ಏಕ) ಎಳೆದೊಯ್ಯುವೆನಲ್ಲದಿರೆ | ಕೊಳು | ಗುಳದಲಿ ಎನಗಿದಿರಹರೆ ‖ ಕಲಿ ಧೂಮ್ರಾಕ್ಷನು ನಾನು | ನೀ | ತಿಳಿದುಕೊ ಸಾರಿ ನುಡಿದೆನು ‖

ದೇವಿ : (ಏಕ) ಎಳೆದೊಯ್ಯುವ ಭಟನಹುದು | ಅರೆ | ಘಳಿಗೆಯೊಳೀಕ್ಷಿಪೆನೆಂದು ‖ ತಳೆಯೆ ಖತಿಯ ಜ್ವಾಲೆಯಲಿ | ಉರಿ | ದಿಳೆಗೊರಗಿದ ಖಳನಲ್ಲಿ ‖

(ಯುದ್ಧ , ಧೂಮ್ರಾಕ್ಷ ಸಾಯುತ್ತಾನೆ , ಇಬ್ಬರೂ ತೆರಳುವರು , ವಿಷಯ ತಿಳಿದ ಶುಂಭ ಸಿಟ್ಟಾಗುತ್ತಾನೆ)

ಶುಂಭ : (ತ್ರಿವುಡೆ–2) ಉರುಹಿದಳೆ ಧೂಮ್ರಾಕ್ಷ ದೈತ್ಯನ | ಅರರೆ ಚೋದಿಗವಿನ್ನು ತರುಣಿಯ ‖ ಬರಿದೆ ಬಿಡೆನೆಂದೆನುತ ಚಂಡ ಮುಂ | ಡರನು ಕರೆದ ‖

(ಚಂಡಮುಂಡರನ್ನು ಕರೆಯುತ್ತಾನೆ , ಇಬ್ಬರೂ ಬರುವರು)

ಶುಂಭ : (ತ್ರಿವುಡೆ–2) ನಡೆದು ನೀವೀಕ್ಷಣದಿ ಮಡದಿಯ | ಸಡಗರವ ನಿಲಿಸುತ್ತ ಮುಡಿಯನು ‖ ಪಿಡಿದು ಎಳೆತಹುದೆನಲು ಕೇಳುತ | ನಡೆದರಂದು ‖

(ಅವರನ್ನು ಯುದ್ಧಕ್ಕೆ ಕಳಿಸುತ್ತಾನೆ , ಚಂಡಮುಂಡರು ಮತ್ತು ದೇವಿ ಇದಿರಾಗುತ್ತಾರೆ)

ಚಂಡ : (ಅಷ್ಟ–2) ಛಲವಿದೇನೆಲೆ ನಿನಗೆ | ಶುಂಭಾಖ್ಯನ | ಒಲಿಸಿಕೊ ಎಂಬ ಹಾಗೆ ‖ ತಿಳುಹಲು ನೀತಿಯ ಧಿಕ್ಕರಿಸುತ್ತಲೆ | ಕಲಹವ ಬಯಸಿ ಮಿಗೆ ‖

ಮುಂಡ : (ಅಷ್ಟ–2) ಉರುಹಿದೆ ಧೂಮ್ರಾಕ್ಷನ | ವಿಕ್ರಮವದು | ಮೆರೆಯದೆಮ್ಮಲಿ ಜತನ ‖ ಅರಿತುಕೊ ಚಂಡಮುಂಡರು ನಮಗೆಣೆಯಾರು | ಭರದೊಳೊಯ್ಯುವೆವು ನಿನ್ನ ‖

ದೇವಿ : (ಅಷ್ಟ–2) ಗಂಡುಗಲಿಗಳಹುದು | ರಣದಿ ಚಂಡ | ಮುಂಡರೀಕ್ಷಿಸಬಹದು ‖ ಕೊಂಡು ಪೋಗಲು ಬಂದಿರೇ ನಿಮ್ಮ ವಿಕ್ರಮ | ಕಂಡಪೆ ಧುರದೊಳಿಂದು ‖

(ಯುದ್ಧ , ನಡುವೆ ದೇವಿ ಕಾಳಿಯ ರೂಪ ಧರಿಸಿ ಬರುವಳು)

ದೇವಿ : (ಅಬ್ರ) ಖೂಳರಲಿ ಸೆಣಸಾಡಿ ದೇವಿಯು | ಕಾಳಗದಿ ಜಯ ಕಾಣದಿರುತಿರೆ ‖ ಕಾಳಿ ರೂಪವ ಧರಿಸಿ ದೈತ್ಯರ ಶಿರಗಳನು ಕಡಿದು ‖

ದೇವಿ : (ಅಬ್ರ) ಲೀಲೆಯಿಂ ದಾನವರ ರುಂಡವ | ಕಾಲಿನಿಂದೊದೆಯುತ್ತಲಾಗ ಕ ‖ ರಾಳ ರೂಪದಿ ಚೆಂಡನಾಡಿದಳಾ ಜಗನ್ಮಾತೆ ‖

(ಕಾಳಿಯ ರೂಪಕ್ಕೆ ಹೆದರಿ ಓಡಿದರೂ ಬಿಡದೆ ಅಟ್ಟಿಸಿಕೊಂಡು ಹೋಗಿ ಕೊಲ್ಲುವಳು , ಕಾಳಿ ಮತ್ತು ದೇವಿಯರಿಗೆ ಆರತಿ ಎತ್ತುವರು)

(ಚೌತಾಳ) ವಧುಗಳ ಕಲಿ ಚೂಡಾಮಣಿಗೆ | ಸದಮಲ ರೂಪಿಣಿ ಕಾಳಿಕೆಗೆ ‖ ಮುದದಿಂ ದುಯ್ಯಾಲೆಯನಾಡಿದಳಿಗೆ| ಆಡಿದ ಬಲು ಸೊಬಗಿನ ಸೊನೆಗೆ‖ ವಿಧ ವಿಧದಾರತಿಯಾ ಬೆಳಗಿದರು | ಬೆಳಗಿದರು ‖

(ಎಲ್ಲರೂ ತೆರಳಿದ ನಂತರ ಪದ್ಯಕ್ಕೆ ಶುಂಭನ ಪ್ರವೇಶ)

ಶುಂಬ : (ಜಂಪೆ–2) ಚಂಡಮುಂಡರ ತಲೆಯ | ಚೆಂಡನಾಡಿದ ವಾರ್ತೆ | ಗಂಡುಗಲಿ ಲಾಲಿಸುತ ಲಾಗ ‖ ಖಂಡಪರಶುವಿನಂತೆ ಗೊಂಡು ಖತಿಯನು ಬಿಡೆನು | ಪುಂಡರೀಕಾಂಬಕಿಯನೆನುತ ‖

(ಶುಂಭ ಯುದ್ಧಕ್ಕೆ ಹೊರಟಾಗ ರಕ್ತಬೀಜಾಸುರ ಬರುತ್ತಾನೆ)

ರಕ್ತಬೀಜ : (ಜಂಪೆ–2) ದನುಜ ಸೇನೆಯ ಕೂಡಿ | ರಣಕೆ ಪೊರಡುತಲಿರಲು | ಅನಿತನೀಕ್ಷಿಸಿ ಕಲಾದೇವಿ ‖ ತನಯನಾಗಿಹ ರಕ್ತಬೀಜಾಖ್ಯನೈತಂದು | ಮಣಿದೆಂದನಾಗ ದೈತ್ಯನಲಿ ‖

ರಕ್ತಬೀಜ : (ಜಂಪೆ–2) ದಿವಿಜರಿಪು ಭಳಿರೆ ನಿನ್ನ | ಪರಿಕಿಸಲು | ರವಿಗೆ ಸ್ವರ್ಭಾನು ಗ್ರಹಣ ‖ ಕವಿದಂತೆ ಕಾಣುತಿಹುದು | ಬಂದ ಪರಿ | ಭವವೇನು ಉಸಿರೆನ್ನೊಳು ‖

ಶುಂಭ : (ಜಂಪೆ–2) ಚಿತ್ತವಿಸು ರಕ್ತಬೀಜ | ನಮ್ಮವರು | ಮೃತ್ತಿಕೆಯ ಘಟ ಸಮಾಜ ‖ ಧಾತ್ರಿಯೊಳು ಬಿದ್ದಂದದಿ | ಓರ್ವಳಿಂ | ಸತ್ತರೇನೆಂಬೆ ಧುರದಿ ‖

ರಕ್ತಬೀಜ : (ಜಂಪೆ–2) ಆರೊಳಗೆ ಸಮರ ನಿನಗೆ | ಬಂತದರ | ಕಾರಣವದೇನಿಂದಿಗೆ ‖ ಘೋರ ದಾನವರ ಕೊಲಲು | ಸತಿಯಾವ | ಧಾರಿಣಿಯೊಳುದಿಸಿರ್ಪಳು ‖

ರಕ್ತಬೀಜ : (ಅಷ್ಟ–1) ದನುಜೇಶ ಕೇಳೆನ್ನ ಮಾತ | ಏತ | ಕಿನಿತು ನೀ ಭ್ರಮೆಯಾದೆ ಮನದಲ್ಲಿ ವ್ಯರ್ಥ ‖ ಮನಸಿಜ ಶರಕೆ ಸಿಲುಕುತ | ವರ | ವನಿತೆಯ ಬಯಕೆಯಾಂತಿಹೆ ದೈತ್ಯನಾಥ ‖

ರಕ್ತಬೀಜ : (ಅಷ್ಟ–1) ತರುಣಿಯಲ್ಲವಳಾದಿಮಾಯೆ | ದೈತ್ಯ | ವರರ ಸಂಹರಿಸುತ್ತ ತ್ರಿದಶರ ಪೊರೆಯೆ ‖ ನೆರೆ ಗೋಚರಿಸುವಳು ದೊರೆಯೆ |ಸರ್ವೇ|ಶ್ವರಿಯಲಿ ಮೋಹ ಬೀರಿರುವುದು ಸರಿಯೆ‖

ರಕ್ತಬೀಜ : (ಅಷ್ಟ–1) ಅಲ್ಪನೇ ಧೂಮ್ರಲೋಚನನು | ಕೊಲುವ | ರಿರ್ಪರೆ ರಣದಲಿ ಚಂಡ ಮುಂಡರನು ‖ ಅಪ್ರಯೋಜಕವಾಗಿ ನೀನು | ಯಮ | ಗೊಪ್ಪಿಸಲೇತಕೆ ದೈತ್ಯಾನ್ವಯವನು ‖

ರಕ್ತಬೀಜ : (ಭಾಮಿನಿ) ಬಿಡು ಮನದ ಮೂರ್ಖತೆಯ ತ್ರೈಜಗ|ದೊಡತಿ ಚರಣಕೆ ಭಕ್ತಿಯಿಂದಲೆ‖ ಪೊಡಮಡುತ ಪಡೆದವಳ ಕಾರುಣ್ಯದಲಿ ಧಾತ್ರಿಯಲಿ ‖ ಜಡಜಪೀಠನ ವರದ ತೆರದಲಿ | ಪಡೆದು ಸುಖವನು ಬಾಳ್ವುದೆನುತಲಿ ‖ ನುಡಿಯೆ ನೀತಿಯ ಕೇಳಿ ಘರ್ಜಿಸುತೆಂದ ಶುಂಭಾಖ್ಯ ‖

ಶುಂಭ : (ಏಕ) ಬಿಡು ಬಿಡು ನಿನ್ನಯ ನುಡಿಗಳನೆಲ್ಲವ | ನುಡಿಯದಿರೆನ್ನೊಡನೆ ‖ ನಡುಗಿಸಿ ತ್ರಿಜಗವ ಕಡುಗಲಿತನದಲಿ | ಪೊಡಮಡುವೆನೆ ಸತಿಗೆ ‖

ರಕ್ತಬೀಜ : (ಏಕ) ಇನಿತಿರೆ ನಿಶ್ಚಯ ನಿನ್ನಯ ಮನದಲಿ | ಅನುಮಾನವದೇಕೆ ‖ ಎನಗಾಜ್ಞೆಯ ಕೊಡು ಕ್ಷಣದಲಿ ಪೋಪೆನು | ವನಿತೆಯೊಡನೆ ಧುರಕೆ ‖

{ಶುಂಭ : (ಏಕ) ತೊಟ್ಟ ಛಲವ ನಾ ಬಿಟ್ಟರೆ ಜಗದಿ ಕೈ | ತಟ್ಟುತ ನಗದಿಹರೆ ‖ ಪುಟ್ಟಿದ ಜೀವಿಗೆ ದಿಟ್ಟ ಮರಣವದು | ತಟ್ಟುವುದೇ ದಿಟವು ‖

ರಕ್ತಬೀಜ : (ತ್ರಿವುಡೆ–2) ನಂಜಿನಾ ನುಡಿ ಕೇಳುತಾಗಲೆ | ರಕ್ತಬೀಜನು ಕನಲಿ ನುಡಿದನು ‖ ಅಂಜದೀಗಲೆ ಪೋಗಿ ತರುಣಿಯ | ಕರೆದು ತಹೆನು ‖}

(ರಕ್ತಬೀಜ ಯುದ್ಧ ಕ್ಕೆ ಹೊರಡುತ್ತಾನೆ, ದೇವಿಯನ್ನು ನೋಡಿ)

{ರಕ್ತಬೀಜ : (ಭಾಮಿನಿ) ನೋಡಿದನು ಕಲಿ ರಕ್ತಬೀಜನು | ಗಾಢ ಗರ್ವದಿ ಕುಳಿತ ಶಿವೆಯನು ‖ ಆಡಿದನು ತನ್ನೊಳಗೆ ಇವಳನು | ತಿಳಿಯದಿನಿತಾಯ್ತೇ ‖ ಮಾಡಲೇನಕಟಕಟ ಶುಂಭನ | ಕೂಡೆ ಭಾಷೆಯನೊರೆದು ಬಂದಿಹೆ ‖ ಕೇಡು ಇವಳಿಂ ಬದ್ಧವಾದರು | ನುಡಿಸಿದಪೆನೆನುತಾ ‖}

ರಕ್ತಬೀಜ : (ಅಷ್ಟ–1) ಏಣಾಂಕನಿಭವಕ್ತ್ರೆ ನೀನೆಲೆಗೆ ಶುಂಭ | ದಾನವ ಬಯಸಿದರೆ ‖ ಸಾನುರಾಗದಿ ವರಿಸದೆ ಶೌರ್ಯದಿಂದಲಿ | ಚೂಣಿಯ ಬಯಸಿದರೆ ‖

ರಕ್ತಬೀಜ : (ಅಷ್ಟ–1) ವ್ಯರ್ಥ ವಿಕ್ರಮವದು ಮೆರೆಯದು ಎನ್ನಲ್ಲಿ | ರಕ್ತಬೀಜಾಖ್ಯ ಕಾಣೆ ‖ ಇತ್ತಿಹ ಕಮಲಜ ವರದಿ ಭಂಗಿಸುವ ಸ | ಮರ್ಥನು ನಿನ್ನ ಜಾಣೆ ‖

{ರಕ್ತಬೀಜ : (ತ್ರಿವುಡೆ–2) ಎಲೆಲೆ ಮಾನಿನಿ ಶುಂಭ ದಾನವ | ಒಲಿದು ನಿನ್ನನು ಒರಿಸಲೋಸುಗ ‖ ತಿಳುಹೆ ನೀತಿಯ ಧಿಕ್ಕರಿಸುತಲೆ | ಛಲದಿ ನೀನು ‖

ರಕ್ತಬೀಜ : (ತ್ರಿವುಡೆ–2) ಬಾರದಿರೆ ಎಳೆದೊಯ್ಯುತೀಗಲೆ | ಕೀರವಾಣಿಯೆ ಕೇಶ ಪಿಡಿಯುತ ‖ ಭರದೊಳೊಪ್ಪಿಸಿ ಅರಸ ಶುಂಭಗೆ | ಪರಿಣಯವನು ‖}

ದೇವಿ : (ತ್ರಿವುಡೆ–2) ಧುರ ಪರಾಕ್ರಮಿ ಎಂಬುದರಿತೆನು | ತರುಣಿಯಾದೆನ್ನೊಡನೆ ಸೆಣಸುತ ‖ ಮೆರೆಸು ನಿನ್ನಯ ವಿಕ್ರಮವ ನಾ | ನರಿತುಕೊಂಬೆ ‖

(ಯುದ್ಧ , ದೇವಿ ದಣಿಯುತ್ತಾಳೆ)

(ಭಾಮಿನಿ) ದನುಜನಲಿ ಸೆಣಸಾಡಿ ದೇವಿಯು | ದಣಿದ ಕಾರಣದಿಂದ ತನ್ನಯ ‖ ತನುವನಲುಗಿಸೆ ಸಪ್ತಮಾತೃಕೆಯರು ಸರಾಗದಲಿ ‖

(ಸಪ್ತ ಮಾತೃಕೆಯರು ಜನಿಸುತ್ತಾರೆ , ಯುದ್ಧ)

(ಅಬ್ರ) ಜನಿಸುತೊಡನಿಂದ್ರಾಣಿ ಎಂಬಳು | ಹಣೆಗೆರಗೆ ಕುಲಿಶದೊಳು ಶೋಣಿತ ‖ ಜನಪದವ ಸೋಂಕಿದರೆ ದೈತ್ಯರು ಕೋಟಿ ಸಂಖ್ಯೆಯಲಿ ‖

(ಕೋಟಿ ದೈತ್ಯರು ಜನಿಸುತ್ತಾರೆ , ಸಪ್ತ ಮಾತೃಕೆಯರೊಡನೆ ಯುದ್ಧ ಮಾಡುತ್ತಾರೆ)

(ಅಬ್ರ) ಧರಣಿಯಂ ಶೋಣಿತವು ಸೋಂಕಿದರೆ ದೈತ್ಯರೀ | ತೆರದಿ ಜನಿಸುವರ್‍ರೈಸೆ ಧರಿಸಿ ಘೋರಾಕಾರ | ಮೆರೆವ ರಸನೆಯ ಚಾಚಿ ಹೀರಿ ರಕ್ತವನೆಲ್ಲ ದಾನವರನು ‖ ಭರದಿ ಸಂಹರಿಸುವೆನು ಎಂದು ನಿಶ್ಚಯಗೈದು | ಮೆರೆವ ರಕ್ತೇಶ್ವರಿಯ ದೇಹವಂ ಧರಿಸುತ್ತ | ಧುರುಳರನು ಸಂಹರಿಸಿ ರಕ್ತಬೀಜನ ತರಿದಳೇನೆಂಬೆನದ್ಭುತವನು ‖

(ರಕ್ತೇಶ್ವರಿಯು ಬಂದು ಕುಳಿತುಕೊಳ್ಳುತ್ತಾಳೆ , ದೈತ್ಯರನ್ನು ಮತ್ತು ರಕ್ತಬೀಜನನ್ನು ದೇವಿ ಕೊಲ್ಲುತ್ತಾಳೆ , ದೇವಿ ಮತ್ತು ರಕ್ತೇಶ್ವರಿಯರಿಗೆ ಆರತಿ ಎತ್ತುವರು)

(ಚೌತಾಳ) ರಕ್ತಾಂಬರದುಡುಗೆಯ ರಮೆಗೆ | ರಕ್ತಾಕ್ಷಿಗೆ ರಕ್ತೇಶ್ವರಿಗೆ ‖ ರಕ್ತಬೀಜನನು ಮಡುಹಿ ದವಳಿಗೆ | ಮಡುಹಿದ ವರ ಮಾಯಾಂಬಿಕೆಗೆ ‖ ಮುತ್ತಿನಾರತಿಯಾ ಬೆಳಗಿದರು | ಬೆಳಗಿದರು ‖

(ರಕ್ತೇಶ್ವರಿಯ ಘರ್ಜನೆ , ದ್ವಾಪರೆಯಲ್ಲಿ ತೃಪ್ತಿಪಡಿಸುತ್ತೇನೆಂದು ದೇವಿ ಸಮಾಧಾನಿಸುವಳು , ಎಲ್ಲರೂ ತೆರಳುವರು , ಪದ್ಯಕ್ಕೆ ಶುಂಭ ಬರುವನು)

ಶುಂಭ : (ತ್ರಿವುಡೆ–2) ರಕ್ತಬೀಜಾಸುರನು ಮಡಿದಿಹ | ವರ್ತಮಾನವ ಕೇಳಿ ಶುಂಭನು ‖ ಕೃತ್ತಿವಾಸನ ತೆರದಿ ಘರ್ಜಿಸಿ | ದೈತ್ಯಬಲವಾ ‖

ಶುಂಭ : (ಮಟ್ಟೆ) ಮತ್ತಕಾಶಿನಿಯನು ಬಿಡೆನೆ | ನುತ್ತಲಾಗ ದೈತ್ಯಪತಿಯು ‖ ಒತ್ತಿನನುಜನನ್ನು ಕರೆದ | ಮತ್ತೆ ಸಮರಕೆ ‖

(ನಿಶುಂಭನನ್ನು ಕರೆಯುವನು , ನಿಶುಂಭ ಬರುವನು)

ನಿಶುಂಭ : (ಏಕ) ಏನಿದು ರೋಷವು ಮಾನನಿಧಿಯೆ ಇಂ | ದಾನರಿಯದೆ ಪೋದೆ ‖ ದಾನವಕುಲ ನಭಭಾನುವೆ ಎನ್ನಲಿ | ನೀನೊರೆಯುವುದಿಂದೆ ‖

ಶುಂಭ : (ಏಕ) ಅನುಜನೆ ಲಾಲಿಸು ವನದೊಳಗಿರುತಿಹ | ವನಜಾಂಬಕಿ ನಮ್ಮ ‖ ದನುಜರ ತರಿಯುತ ಘನಮದದಿಂದಿಹಳ್ | ಎನಲೇನನು ತಮ್ಮ ‖

ನಿಶುಂಭ : (ಏಕ) ಅರರೇ ಚೋದಿಗ ತರುಣಿಯು ದೈತ್ಯರ | ಶಿರವರಿದಳೆ ಇಂದು ‖ ತೆರಳಿ ನಾನಾಕೆಯ ತುರುಬ ಪಿಡಿದು ಎಳ | ತರುವೆನು ಸಭೆಗಿಂದು ‖

(ಶುಂಭ–ನಿಶುಂಭ ಇಬ್ಬರೂ ಯುದ್ಧಕ್ಕೆ ಹೋಗುವರು , ಮೊದಲು ನಿಶುಂಭನು ದೇವಿಯನ್ನು ಇದಿರಿಸುತ್ತಾನೆ)

ನಿಶುಂಭ : (ತ್ರಿವುಡೆ–2) ಭಳಿರೆ ಮಾನಿನಿ ಅಣ್ಣ ಶುಂಭನ | ವಲಿಸದ್ಯಾತಕೆ ವ್ಯರ್ಥ ಧುರದಲಿ ‖ ತಲೆಯನೀಗುವೆ ಬಂದು ದೈತ್ಯನ | ಲಲನೆಯಾಗು ‖

ದೇವಿ : (ತ್ರಿವುಡೆ–2) ಹಿಂದಕೀತೆರಲಿಂದಲರುಹಿದ | ಮಂದಮತಿಗಳಿಗೆಂದೆ ಧುರದಲಿ ‖ ಅಂದಗೆಡಿಸಿದಡೆನ್ನ ವರಿಸುವೆ | ಎಂದೆನುತಲಿ ‖

ನಿಶುಂಭ : (ತ್ರಿವುಡೆ–2) ನಾರಿ ಹತ್ಯವು ಭೂಷಣವೆ ಬಲು | ವೀರರಿಗೆ ಎಂದೆನುತ ಪೇಳಿದೆ ‖ ಮೀರಿ ನುಡಿದೆಯ ನಿನ್ನ ನೆರೆ ಹಂ | ಕಾರನಿಲಿಪೆ ‖

(ಯುದ್ಧ , ನಿಶುಂಭನನ್ನು ಕೊಲ್ಲುವಳು , ಕೂಡಲೆ ಶುಂಭನು ದೇವಿಯನ್ನು ಇದಿರಿಸುತ್ತಾನೆ)

ಶುಂಭ : (ಅಷ್ಟ–2) ತರುಣಿ ನೀನ್ಯಾರು ನಿನ್ನ | ರಕ್ಷಿಸುತಿಹ | ಪುರುಷರೆಂಬುವ ಹದನ ‖ ಅರಿಯದಂದದಿ ಕಾಡ ಚರಿಸುವ ಸುದತಿಯೆ | ಮರೆಮಾಜದುಸುರೀಕ್ಷಣ ‖

ದೇವಿ : (ಅಷ್ಟ–2) ಮಾತೆ ಜನಕರಿಲ್ಲವು | ಎಲವೊ ಮೂಢ | ಪಾತಕರನೆ ಗೆಲ್ಲಲು ‖ ಘಾತಗೈಯಲು ಸರ್ವ ಚೇತನಾತ್ಮಕಿಯಾಗಿ | ಜಾತಳಾಗಿಹೆನಿಂದಿಗೆ ‖

ಶುಂಭ : (ಏಕ) ಧಿರುರೆ ಶಭಾಸು ಮೆಚ್ಚಿದೆನು | ಎಲೆ | ತರುಣಿಯೆ ನಿನಗಾನಿನ್ನು ‖ ವರಿಸದೆ ಎನ್ನನು ಮುದದಿ | ಸಂ | ಗರವನು ಬಯಸಿದೆ ಛಲದಿ ‖

ದೇವಿ : (ಏಕ) ವರಿಸುವ ಮನವಿರ್ದವನು | ಸಂ | ಗರಕೈತಾರದೆ ನೀನು ‖ ಬರಿದೆ ಕಳುಹಿ ದೈತ್ಯರನು | ಈ | ಪರಿ ಕೊಲಿಸಿದ ಬಗೆ ಏನು ‖

(ಯುದ್ಧ , ಶುಂಭನನ್ನು ಕೊಲ್ಲುವಳು , ದೇವೇಂದ್ರ ಆರತಿ ಎತ್ತುತ್ತಾನೆ)

(ಚೌತಾಳ) ಕಲಿಶುಂಭ ನಿಶುಂಭಾಂತಕಿಗೆ | ಕಲಿ ಮಲ ದಾರಿದ್ರ್ಯ ನಾಶಿನಿಗೆ ‖ ಕಳಕಳಿಸುವ ವದನದ ಕಲ್ಯಾಣಿಗೆ | ನಳಿನ ನಯನೆ ದುರ್ಗಾಂಬಿಕೆಗೆ ‖ ನಲವಿಂದಾರತಿಯಾ ಬೆಳಗಿದರು | ಶೋಭಾನೆ ‖

ದೇವಿ : (ತ್ರಿವುಡೆ–1) ಕಂಡೆಯಾ ಸುರನಾಥ ದೈತ್ಯರ | ರುಂಡವನು ಸಂಗ್ರಾಮದಲಿ ಭೂ ‖ ಮಂಡಲಕೆ ಕೆಡಹಿರ್ಪ ಹದನವ | ಚಂದವಾಗಿ ‖

ದೇವಿ : (ತ್ರಿವುಡೆ–1) ದ್ವಾಪರಾಯುಗದೊಳಗೆ ಒಮ್ಮೆಗೆ | ಶ್ರೀಪತಿಯ ಸಹಭವೆ ಎನಿಸಿ ನಾ ‖ ರೂಪದೋರುವೆ ಹೊರತು ಅನ್ಯಥಾ | ಈ ಪರಿಯಲಿ ‖

ದೇವಿ : (ತ್ರಿವುಡೆ–1) ಕಾಣಸಿಗುವವಳಲ್ಲ ಹರಿಯಲಿ | ತಾನೆ ನೆಲೆಯಾಗಿರ್ದು ಖಳರನು ‖ ಚೂಣಿಯೊಳು ಸದೆಬಡಿವೆ ಭಕ್ತಿಯೊಳ್ | ಧ್ಯಾನಿಪರಿಗೆ ‖

ದೇವಿ : (ತ್ರಿವುಡೆ–1) ಸಕಲ ಇಷ್ಟಾರ್ಥಗಳನೀಯುತ | ಸುಖವದೋರುವೆನೆನುತ ದೇವಿಯು ‖ ದಿಕುಪತಿಗಳಿಗೆ ಅಭಯವನೀಯುತ | ಕಾಣದಾಗೆ ‖

(ಜಂಪೆ–2) ಕುಮುದ ದಳ ಲೋಚನೆಗೆ ಕಾಮಾರಿ ನಾಯಕಿಗೆ | ವಿಮಲ ಕೋಮಲ ಗಾತ್ರೆ ಶರ್ವಾಣಿಗೆ ‖ ಅಮಿತಗುಣ ಸಂಪನ್ನೆ ಅಖಿಳಾಂಡನಾಯಕಿಗೆ | ದ್ಯುಮಣಿ ಶತಕೋಟಿ ತೇಜೋರಾಶಿಗೆ ‖ ಮಂಗಲಂ ಜಯ ಮಂಗಲಂ | ಮಂಗಲಂ ಶುಭ ಮಂಗಲಂ ‖

(ಚೌತಾಳ) ಆದಿದೇವ ಸಕಲಾಗಮ ಪೂಜಿತ ಯಾದವ ಕುಲ ಮೋಹನರೂಪ | ವೇದೋದ್ಧಾರಕ ತಿರುಪತಿ ವೇಂಕಟ ವೇಣುನಾದ ಪ್ರಿಯ ನಮೋ ನಮೋ ‖ ನಾರಾಯಣ ತೇ ನಮೋ ನಮೋ | ಭವ | ನಾರದಸನ್ನುತ ನಮೋ ನಮೋ ‖

* * * * *